# ಅಡಿಕೆ ಒತ್ತಡ, ಭತ್ತಕ್ಕೆ ನೀರು ಕಡಿತ



## ಆಕ್ರೋಶಗೊಂಡ ರೈತರಿಂದ ರಸ್ತೆ ತಡೆ

ದಾವಣಗೆರೆ, ಸೆ. 19 - ಅಕ್ರಮ ಪಂಪ್‌ಸೆಟ್ ಬಳಸುವ ಅಡಿಕೆ ತೋಟ ಗಾರರ ಒತ್ತಡಕ್ಕೆ ಮಣಿದು ಭತ್ತದ ಬೆಳೆಗೆ ಹರಿಸುವ ಭದ್ರಾ ನೀರನ್ನು ನಿಲ್ಲಿಸಲಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿರುವ ರೈತರು, ರಸ್ತೆ ತಡೆ ನಡೆಸಿದ್ದಾರೆ.

ಭದ್ರಾ ಅಚ್ಚುಕಟ್ಟಿಗೆ ಸಂಬಂಧ ಪಡದೇ ಇರುವ ಅಡಿಕೆ ಬೆಳೆಗಾರರು ಪ್ರತಿಭಟನೆ ಮಾಡಿದ್ದಾರೆ ಎಂದು ನೀರು ನಿಲ್ಲಿಸಲಾಗಿದೆ. ನಿಜವಾದ ಅಚ್ಚುಕಟ್ಟುದಾರರು ನೀರಿಗಾಗಿ ಹೋರಾಡುವ ಪರಿಸ್ಥಿತಿ ಬಂದಿದೆ ಎಂದು ರೈತ ಮುಖಂಡರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಭದ್ರಾ ಅಣೆಕಟ್ಟೆಯಿಂದ ನೀರು ಹರಿಸುವುದನ್ನು ನಿಲ್ಲಿಸಲು ಭದ್ರಾ ಯೋಜನಾ ನೀರಾವರಿ ಸಲಹಾ ಸಮಿತಿ ಸಭೆಯಲ್ಲಿ ನಿರ್ಧರಿಸಲಾಗಿತ್ತು. ಆದರೆ, ದಾವಣಗೆರೆ ಭಾಗದ ಭತ್ತದ ರೈತರ ಒತ್ತಡದ ನೀರು ಹರಿಸುವುದನ್ನು ಮುಂದುವರೆಸಲಾಗಿತ್ತು. ಆದರೆ, ಮಂಗಳವಾರ ಮೇಲ್ದಂಡೆ ಭಾಗದ ರೈತರು ಪ್ರತಿಭಟನೆ ನಡೆಸಿದ ನಂತರ ಭದ್ರಾ ಬಲದಂಡೆಗೆ ನೀರು ನಿಲ್ಲಿಸಲಾಗಿದೆ.

ಈ ಬಗ್ಗೆ ನಗರದ ನೀರಾವರಿ ಕಚೇರಿ ಆವರಣದಲ್ಲಿ ಪ್ರತಿಭಟನಾ ಸಭೆ ನಡೆಸಿದ ರೈತರು, ಈ ಮೊದಲು ತೀರ್ಮಾನಿಸಿದಂತೆ 100 ದಿನ ನಿರಂತರ ನೀರು ಹರಿಸುವಂತೆ ಒತ್ತಾಯಿಸಿದರು. ನಂತರ ಹದಡಿ ರಸ್ತೆಯನ್ನು ತಡೆದು ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಭಾರತೀಯ ರೈತ ಒಕ್ಕೂಟದ ಅಧ್ಯಕ್ಷ ಹೆಚ್.ಆರ್. ಶಾಮನೂರು ಲಿಂಗರಾಜ್, ಅಕ್ರಮ ಪಂಪ್‌ಸೆಟ್‌ಗಳ ಅಡಿಕೆ ತೋಟದವರ ಒತ್ತಡಕ್ಕೆ ಮಣಿದು, ನೀರು ನಿಲ್ಲಿಸಲಾಗಿದೆ. ಇದರಿಂದಾಗಿ ಭತ್ತದ ಬೆಳೆ ಹಾಳಾಗಲಿದೆ. ಈ ಮೊದಲು ನಿರ್ಧರಿಸಿದಂತೆ ಸತತ 100 ದಿನ ನೀರು ಹರಿಸಬೇಕು ಎಂದು ಒತ್ತಾಯಿಸಿದರು.

ಭದ್ರಾ ಅಚ್ಚುಕಟ್ಟಿನ ಶೇ. 70 ಭಾಗ ದಾವಣಗೆರೆ ಜಿಲ್ಲೆಯಲ್ಲಿದೆ. ಆದರೂ, ಕೆಲವೇ ರೈತರ ಮಾತು ಕೇಳಿ ನೀರು ಹರಿಸುವುದನ್ನು ನಿಲ್ಲಿಸಲಾಗಿದೆ. ಜಲಾಶಯದಲ್ಲಿ ಈಗ 30.54 ಟಿಎಂಸಿ ನೀರಿದೆ. ನಿರಂತರ ನೀರು ಹರಿಸಿದರೂ ಬೇಸಿಗೆ ನಿಭಾಯಿಸುವಷ್ಟು ನೀರು ಉಳಿಯಲಿದೆ ಎಂದು ಹೇಳಿದರು.


ಎಪಿಎಂಸಿ ಮಾಜಿ ಅಧ್ಯಕ್ಷ ನಾಗೇಶ್ವರರಾವ್ ಮಾತನಾಡಿ, ಸರ್ಕಾರ ಐದು ಗ್ಯಾರಂಟಿಗಳನ್ನು ಜಾರಿಗೆ ತರುತ್ತಿರುವ ರೀತಿಯಲ್ಲೇ ರೈತರಿಗೆ ನೀರಿನ ಗ್ಯಾರಂಟಿ ಕೊಡಬೇಕು. ಭದ್ರಾ ಅಣೆಕಟ್ಟೆಯನ್ನು ರೈತರ ವಶಕ್ಕೆ ನೀಡಿದರೆ ಭತ್ತಕ್ಕೆ ಸಮರ್ಪಕ ನೀರು ಕೊಡುವ ಜೊತೆಗೆ ಹತ್ತು ಟಿಎಂಸಿ ನೀರನ್ನೂ ಉಳಿಸುತ್ತೇವೆ ಎಂದು ಸವಾಲು ಹಾಕಿದರು.

ಎಪಿಎಂಸಿ ಮಾಜಿ ಅಧ್ಯಕ್ಷ ಗಣೇಶಪ್ಪ ಮಾತನಾಡಿ, ಭತ್ತದ ಬೆಳೆಗಾಗಿ ಪ್ರತಿ ಎಕರೆಗೆ 25-30 ಸಾವಿರ ರೂ. ಈಗಾಗಲೇ ಖರ್ಚಾಗಿದೆ. ನಿರಂತರ ನೀರು ಹರಿಸುವುದಾಗಿ ರೈತರಿಗೆ ಸುಳ್ಳು ಸಂದೇಶ ಕಳಿಸಿ, ಈಗ ನೀರು ಬಂದ್ ಮಾಡಿದರೆ ರೈತರು ಸಂಕಷ್ಟಕ್ಕೆ ಸಿಲುಕುತ್ತಾರೆ ಎಂದು ಹೇಳಿದರು.

ಪ್ರತಿಭಟನಾ ಸಭೆಯಲ್ಲಿ ರೈತ ಮುಖಂಡರಾದ ಕೃಷ್ಣಮೂರ್ತಿ, ಮಂಜಣ್ಣ, ವಿಜಯಕುಮಾರ್ ಆರನೇಕಲ್, ರವಿಕುಮಾರ್ ಹಂಪನೂರು, ಮಂಜುನಾಥ ಶಿರಮಗೊಂಡನಹಳ್ಳಿ ಮತ್ತಿತರರು ಉಪಸ್ಥಿತರಿದ್ದರು.

> ಆನ್ ಅಂಡ್ ಆಫ್ ವ್ಯವಸ್ಥೆ ಮಾಡಿದರೆ ಕೊನೆ ಭಾಗಕ್ಕೆ ನೀರು ಸಿಗದೇ ಭತ್ತದ ಬೆಳೆ ನಾಶವಾಗಲಿದೆ. ಈ ಹಿಂದೆ ನಿಗದಿಪಡಿಸಿದಂತೆ ನೀರು ನಿರಂತರವಾಗಿ ಹರಿಸದೇ ಇದ್ದರೆ ತೀವ್ರ ಹೋರಾಟ ನಡೆಸಲಾಗುವುದು.
>
> **- ಶಾಮನೂರು ಹೆಚ್.ಆರ್. ಲಿಂಗರಾಜ್**
>
> ಮೊದಲು 100 ದಿನ ನಿರಂತರ ನೀರು ಹರಿಸುವುದಾಗಿ ಹೇಳಲಾಗಿತ್ತು. ನಂತರ ಆನ್ ಅಂಡ್ ಆಫ್ ಪದ್ಧತಿ ಎನ್ನಲಾಯಿತು. ಕಳೆದ ಶನಿವಾರ ಮತ್ತೆ ನೀರು ಕೊಡುವುದಾಗಿ ಹೇಳಿ, ಮಂಗಳವಾರ ನೀರು ನಿಲ್ಲಿಸಲಾಗಿದೆ. ರೈತರ ಜೊತೆ ಚೆಲ್ಲಾಟ ಆಡಲಾಗುತ್ತಿದೆ.
>
> **- ನಾಗೇಶ್ವರರಾವ್**

# ಸಿರಿಗೆರೆ : ಇಂದಿನಿಂದ ಲಿಂ.ಶಿವಕುಮಾರ ಶ್ರೀಗಳ ಶ್ರದ್ಧಾಂಜಲಿ



ಚಿತ್ರದುರ್ಗ ಜಿಲ್ಲೆಯ ಸಿರಿಗೆರೆಯ ತರಳಬಾಳು ಬೃಹನ್ಮಠದಲ್ಲಿ ಇಂದಿನಿಂದ ಇದೇ ದಿನಾಂಕ 24ರವರೆಗೆ ಲಿಂಗೈಕ್ಯ ಶ್ರೀ ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳವರ 31ನೆಯ ಶ್ರದ್ಧಾಂಜಲಿ ಕಾರ್ಯಕ್ರಮಗಳು ಶ್ರೀ ತರಳಬಾಳು ಜಗದ್ಗುರು ಡಾ.ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳ ಸಾನ್ನಿಧ್ಯದಲ್ಲಿ ನಡೆಯಲಿವೆ. ನಾಡಿನ ಹಿರಿಯ ವಿಜ್ಞಾನಿಗಳು, ರಾಜಕಾರಣಿಗಳು, ಅಧಿಕಾರಿಗಳು ಮತ್ತು ಕಲಾವಿದರು ಈ ಶ್ರದ್ಧಾಂಜಲಿ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ.

ಇಂದು ಸಂಜೆ 6 ಗಂಟೆಗೆ ನಡೆಯುವ ಕಾರ್ಯಕ್ರಮಕ್ಕೆ ಅತಿಥಿಗಳಾಗಿ ಶಾಸಕರುಗಳಾದ ಬಿ.ಜಿ. ಗೋವಿಂದಪ್ಪ, ಬಿ.ಪಿ. ಹರೀಶ್, ಹೆಚ್.ಕೆ. ಸುರೇಶ್ ಮತ್ತು ಕೆ.ಎಸ್. ಬಸವಂತಪ್ಪ.ಆಗಮಿಸಲಿದ್ದಾರೆ.

**ವಿಶೇಷ ಆಹ್ವಾನಿತರು:** ಜಿಲ್ಲಾಧಿಕಾರಿ ಜಿ.ಆರ್.ಜೆ. ದಿವ್ಯಾ ಪ್ರಭು, ಜಿಲ್ಲಾ ರಕ್ಷಣಾಧಿಕಾರಿ ಧರ್ಮೇಂದರ್ ಕುಮಾರ್ ಮೀನಾ, ದಾವಣಗೆರೆ ವಿಶ್ವವಿದ್ಯಾನಿಲಯದ ಕುಲಪತಿ ಬಿ.ಡಿ.ಕುಂಬಾರ್, ಬೆಂಗಳೂರಿನ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ ಭಾಷಾ ಅಲ್ಪಸಂಖ್ಯಾತರ ವಿಭಾಗದ ನಿರ್ದೇಶಕ ಬಿ.ಎಸ್. ರಘುವೀರ್.

ಬೆಳಿಗ್ಗೆ 9.30 ಗಂಟೆಗೆ ಸಾರ್ವಜನಿಕರಿಗೆ ಉಚಿತ ಆರೋಗ್ಯ ತಪಾಸಣೆ ಮತ್ತು ನೇತ್ರ ತಪಾಸಣೆ ಶಿಬಿರಗಳನ್ನು ಶ್ರೀ ಗುರುಶಾಂತೇಶ್ವರ ದಾಸೋಹ ಭವನದಲ್ಲಿ ಏರ್ಪಡಿಸಲಾಗಿದೆ.

**ಸಾಂಸ್ಕೃತಿಕ ಸ್ಪರ್ಧೆಗಳು:** ಬೆಳಿಗ್ಗೆ 10 ಗಂಟೆಗೆ.ಶ್ರೀ ತರಳಬಾಳು ಜಗದ್ಗುರು ವಿದ್ಯಾಸಂಸ್ಥೆಯ ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳಿಗೆ ಸ್ಪರ್ಧೆಗಳು: ವಚನ ನೃತ್ಯ, ಜಾನಪದ ನೃತ್ಯ, ವಚನ ಗಾಯನ, ಕಿರು-ನಾಟಕ, ಚಿತ್ರಕಲೆ.

**ಸಾಂಸ್ಕೃತಿಕ ಕಾರ್ಯಕ್ರಮಗಳು:** ಸಂಜೆ 6 ಗಂಟೆಗೆ. ವಚನಗೀತೆ: ಶ್ರೀಮತಿ ಯಶಾ ದಿನೇಶ್, ದಾವಣಗೆರೆ ಸುಶ್ರಾವ್ಯ ಸಂಗೀತ ವಿದ್ಯಾಲಯ, ನಿರ್ದೇಶಕರು, ನೃತ್ಯ ಪ್ರದರ್ಶನ: ಸ್ಪರ್ಧೆಯಲ್ಲಿ ವಿಜೇತರಾದ ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳಿಂದ ಭರತ ನಾಟ್ಯ ಪ್ರದರ್ಶನ: ವಿದ್ವಾನ್ ಡಾ. ಸಾಗರ್ ಟಿ ಎಸ್, ಶ್ರೀ ಸಾಯಿ ರಾಮನ್ ನೃತ್ಯ ಕೇಂದ್ರ, ತುಮಕೂರು.

ನಾಳೆ ಗುರುವಾರ ಸಂಜೆ 6 ಗಂಟೆಗೆ ಜರುಗುವ ಸಮಾರಂಭಕ್ಕೆ ಮುಖ್ಯ ಅತಿಥಿಗಳಾಗಿ ಸಮಾಜ ಕಲ್ಯಾಣ ಸಚಿವ ಡಾ. ಹೆಚ್.ಸಿ. ಮಹಾದೇವಪ್ಪ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಮಧು ಬಂಗಾರಪ್ಪ, ಶಾಸಕರಾದ ಕೆ.ಸಿ. ವೀರೇಂದ್ರ, ಶಿವಗಂಗಾ ಬಸವರಾಜ್, ಬಿ. ದೇವೇಂದ್ರಪ್ಪ ಮತ್ತು ಕೆ. ಎಸ್. ನವೀನ್, ಮಾಜಿ ಶಾಸಕ ಬೆಳ್ಳಿ ಪ್ರಕಾಶ್ ಕಡೂರು ಆಗಮಿಸುವರು.

**ಸಾಂಸ್ಕೃತಿಕ ಸ್ಪರ್ಧೆಗಳು:** ಬೆಳಿಗ್ಗೆ 10 ಗಂಟೆಗೆ.ಶ್ರೀ ತರಳಬಾಳು ಜಗದ್ಗುರು ವಿದ್ಯಾಸಂಸ್ಥೆಯ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಸ್ಪರ್ಧೆಗಳು: ವಚನ ನೃತ್ಯ, ಜಾನಪದ ನೃತ್ಯ, ಕಿರು-ನಾಟಕ, ವಚನ ಗಾಯನ, ಏಕಪಾತ್ರಾಭಿನಯ, ಆಶುಭಾಷಣ, ಚಿತ್ರಕಲೆ, ರಸಪ್ರಶ್ನೆ, ಪ್ರಬಂಧ, ಸುಂದರ ಕೈಬರಹ (ಕನ್ನಡ ಮತ್ತು ಇಂಗ್ಲಿಷ್).

**ಸಾಂಸ್ಕೃತಿಕ ಕಾರ್ಯಕ್ರಮಗಳು:** ಸಂಜೆ 6 ಗಂಟೆಗೆ. ವಚನಗೀತೆ: ವಿದ್ಯಾರ್ಥಿಗಳು, ತರಳಬಾಳು ಸಂಗೀತ ಪಾಠಶಾಲೆ ಸಿರಿಗೆರೆ, ನೃತ್ಯ ಪ್ರದರ್ಶನ: ಸ್ಪರ್ಧೆಯಲ್ಲಿ ವಿಜೇತರಾದ ಪ್ರೌಢಶಾಲಾ ವಿದ್ಯಾರ್ಥಿಗಳಿಂದ ಸುಗಮ ಸಂಗೀತ ರಸಧಾರೆ: ರವಿ ಮೂರೂರು, ಸುಗಮ ಸಂಗೀತ ತಂಡ, ಬೆಂಗಳೂರು.

ದಿನಾಂಕ 22 ರ ಶುಕ್ರವಾರ ಸಂಜೆ 6 ಗಂಟೆ ಕಾರ್ಯಕ್ರಮ. ಮುಖ್ಯ ಅತಿಥಿಗಳು: ಹಿಂದುಳಿದ ವರ್ಗ, ಕನ್ನಡ ಮತ್ತು ಸಂಸ್ಕೃತಿ ಸಚಿವ ತಂಗಡಗಿ ಶಿವರಾಜ್ ಸಂಗಪ್ಪ. ಅತಿಥಿಗಳು; ಹರಪನಹಳ್ಳಿ ಶಾಸಕರಾದ ಲತಾ ಮಲ್ಲಿಕಾರ್ಜುನ್, ಕೊಪ್ಪಳ ವಿಶ್ವವಿದ್ಯಾನಿಲಯದ ಕುಲಪತಿ ಡಾ.ಬಿ.ಕೆ. ರವಿ, ರಾಣೇಬೆನ್ನೂರು ಶಾಸಕ ಪ್ರಕಾಶ್ ಕೋಳಿವಾಡ, ದಾವಣಗೆರೆ ಜಿಲ್ಲಾಧಿಕಾರಿ ಡಾ.ಎಂ.ವಿ. ವೆಂಕಟೇಶ್.

**ವಿಶೇಷ ಆಹ್ವಾನಿತರು:** ಬೆಂಗಳೂರಿನ ಯು.ಆರ್ ರಾವ್ ಉಪಗ್ರಹ ಕೇಂದ್ರದ ಇಸ್ರೋ ವಿಜ್ಞಾನಿಗಳು ಮತ್ತು ಉಪನಿರ್ದೇಶಕ ರಾಮನಗೌಡ ವಿ. ನಾಡಗೌಡ, ಇಸ್ರೋ ವಿಜ್ಞಾನಿಗಳಾದ ಡಾ. ಬಿ.ಎಚ್.ಎಂ. ದಾರುಕೇಶ್, ಗೋವಿಂದರಾಜ್ ಶೆಟ್ಟಿ.

# ಘನ ತ್ಯಾಜ್ಯ ವಿಲೇವಾರಿ ಘಟಕ ಸ್ಥಾಪನೆಗೆ ಗ್ರಾಮಸ್ಥರ ವಿರೋಧ

ಮಲೇಬೆನ್ನೂರು, ಸೆ.19 - ಕೊಮಾರನಹಳ್ಳಿಯ ಐತಿಹಾಸಿಕ ಹೆಳವನಕಟ್ಟೆ ಶ್ರೀ ಲಕ್ಷ್ಮಿ ರಂಗನಾಥಸ್ವಾಮಿ ಕೆರೆಗೆ ಜಲ ಮೂಲವಾಗಿರುವ ಗುಡ್ಡಗಾಡಿನಲ್ಲಿ ಮಲೇಬೆನ್ನೂರು ಪುರಸಭೆಯವರು ಘನ ತ್ಯಾಜ್ಯ ವಿಲೇವಾರಿ ಘಟಕ ಸ್ಥಾಪನೆ ಮಾಡಲು ಯತ್ನ ನಡೆಸಿರುವುದನ್ನು ವಿರೋಧಿಸಿ, ಕೊಮಾರನಹಳ್ಳಿ ಗ್ರಾಮಸ್ಥರು ಇತ್ತೀಚಿಗೆ ಪ್ರತಿಭಟನೆ ನಡೆಸಿದರು.

**ಕೆರೆ ನೀರಿನಲ್ಲಿ ನಿಂತ ಗ್ರಾಮಸ್ಥರು ರಕ್ಷಿಸಿ, ರಕ್ಷಿಸಿ, ಉಳಿಸಿಕೊಡಿ :** ಕೆರೆಯನ್ನು ರಕ್ಷಿಸಿ, ಉಳಿಸಿಕೊಡಿ ಪ್ರಕೃತಿ ಉಳಿಸಿಕೊಡಿ, ಬೇಡ ಬೇಡ ಘನ ತ್ಯಾಜ್ಯ ಘಟಕ ಬೇಡ ಎಂದು ಘೋಷಣೆಗಳನ್ನು ಕೂಗಿದರು. ನಂತರ ಪುರಸಭೆ ಮುಖ್ಯಾಧಿಕಾರಿ ಸುರೇಶ್‌ಗೆ ಮನವಿ ಪತ್ರ ನೀಡಿದರು.

ಕೊಮಾರನಹಳ್ಳಿಯ ಐತಿಹಾಸಿಕ ಹೆಳವನಕಟ್ಟೆ ಕೆರೆಯ ಸುತ್ತ ಹಚ್ಚ ಹಸಿರಿನಿಂದ ಕಂಗೊಳಿಸುವ ಗುಡ್ಡಗಾಡುಗಳಿಂದ ಕೂಡಿದ ಸುಂದರ ಪ್ರಕೃತಿ ತಾಣವಿದ್ದು, ಇದನ್ನು ಪ್ರವಾಸಿ ತಾಣ ಮಾಡುವಂತೆ ಗ್ರಾಮಸ್ಥರಾದ ನಾವುಗಳು ಅನೇಕ ವರ್ಷಗಳಿಂದ ಒತ್ತಾಯಿಸುತ್ತಲೇ ಇದ್ದೇವೆ. ಆದರೆ ಇದುವರೆಗೂ ಪ್ರವಾಸಿ ತಾಣ ಕಾರ್ಯಗತಗೊಂಡಿಲ್ಲ. ಇದೀಗ ಇಂತಹ ಐತಿ ಹಾಸಿಕ ಕೆರೆಯ ನೀರನ್ನು ಮಾಲಿನ್ಯ ಮಾಡಲು ಕೆಲ ಅಧಿಕಾರಿಗಳು ಹುನ್ನಾರ ನಡೆಸಿದ್ದಾರೆ ಎಂದು ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸಿದರು.

ನೂರಾರು ವರ್ಷಗಳಿಂದ ದನಕರುಗಳು, ಸುತ್ತಲಿನ ಕಾಡಿನಲ್ಲಿನ ಪ್ರಾಣಿ, ಪಕ್ಷಿಗಳು ಈ ಕೆರೆ ನೀರನ್ನೇ ಆಶ್ರಯಿಸಿವೆ. ಒಂದು ವೇಳೆ ಕೆರೆ ನೀರು ಮಾಲಿನ್ಯವಾದರೆ, ಪ್ರಾಣಿ, ಪಕ್ಷಿಗಳ ಸಂಕುಲಕ್ಕೆ ಕುತ್ತು ಸಂಭವಿಸಲಿದೆ ಎಂದು ಪ್ರತಿಭಟನಾಕಾರರು ಆತಂಕ ಸಂಕುಲಕ್ಕೆ ಆತಂಕ ವ್ಯಕ್ತಪಡಿಸಿದರು.

ಮುಂದಿನ ದಿನಗಳಲ್ಲಿ ಅಕ್ಕ ಪಕ್ಕದ ಗ್ರಾಮಗಳಿಗೆ ಈ ಕೆರೆ ಕುಡಿಯುವ ನೀರನ್ನಾಗಿಯೂ ಬಳಸುವ ಸಾಧ್ಯತೆಯಿದೆ. ಈ ಕೆರೆ ನೀರನ್ನು ಮಾಲಿನ್ಯವಾಗದಂತೆ ಕಾಪಾಡುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ಈಗಾಗಲೇ ವಶಪಡಿಸಿಕೊಂಡಿರುವ ಸ.ನಂ.59ಲ್ಲಿನ 2.20 ಎಕರೆ ಪ್ರದೇಶದಲ್ಲಿ ಯಾವುದೇ ಕಾರಣಕ್ಕೂ ಘನ ತ್ಯಾಜ್ಯ ವಿಲೇವಾರಿ ಘಟಕ ಸ್ಥಾಪನೆಗೆ ಅವಕಾಶ ಕೊಡುವುದಿಲ್ಲ ಎಂದು ಗ್ರಾಮಸ್ಥರು ಆಕ್ರೋಶ ವ್ಯಕ್ತ ಪಡಿಸಿದರು.

ಕೊಮಾರನಹಳ್ಳಿ ಗುಡ್ಡಗಾಡಿನ ಯಾವುದೇ ಪ್ರದೇಶದಲ್ಲೂ ಘನ ತ್ಯಾಜ್ಯ ವಿಲೇವಾರಿ ಘಟಕ ಸ್ಥಾಪನೆ ಮಾಡಬಾರದು. ಜಿಲ್ಲಾಧಿಕಾರಿಗಳು ಕೂಡಲೇ ಘನ ತ್ಯಾಜ್ಯ ವಿಲೇವಾರಿ ಘಟಕ ಸ್ಥಾಪನೆಗೆ ಇಲ್ಲಿ ಮಂಜೂರು ಮಾಡಿರುವ ಜಮೀನಿನ ಆದೇಶವನ್ನು ರದ್ದುಪಡಿಸಬೇಕು ಎಂದು ಗ್ರಾಮಸ್ಥರು ಒತ್ತಾಯಿದರು.

ಪ್ರತಿಭಟನೆಯಲ್ಲಿ ಐರಣಿ ಪುಟ್ಟಪ್ಪ, ಎಸ್. ಡಿ.ರಂಗನಾಥ್, ಯು.ಪರಮೇಶಣ್ಣ, ಬಸವರಾಜ್, ಪರಮೇಶ್ವರನಾಯ್ಕ, ಸಂತೋಷ್, ಮಂಜಪ್ಪ, ಭರಣ, ಜಿ.ಪ್ರಕಾಶ್, ಶಿವನಾಯ್ಕ, ಯು. ಅಣ್ಣಪ್ಪ ಸಾರಥಿ ಪ್ರಕಾಶ್, ಅರಕೆರೆ ಸಿದ್ದಲಿಂಗಪ್ಪ ದಲ್ಲಾಳಿ ಮಂಜಪ್ಪ, ಶಿವು ಎನ್, ರೆಡ್ಡಿ ಹನುಮಂತಪ್ಪ, ಕೆ.ಎನ್. ಸಂತೋಷ್‌ಕುಮಾರ್, ಚೇತನ್ ಬಿ.ಎಂ., ಅಣ್ಣಯ್ಯ ಮತ್ತಿತರರು ಇದ್ದರು.




ಕೆರೆ ನೀರಿನಲ್ಲಿ ನಿಂತು ಕೆರೆ ನೀರು ಮಾಲಿನ್ಯ ಮಾಡದಂತೆ ಒತ್ತಾಯಿಸಿ 'ಕೆರೆ ರಕ್ಷಿಸಿ' ಎಂದು ಘೋಷಣೆ ಕೂಗಿದ ಗ್ರಾಮಸ್ಥರು

## ನಗರದ ದೊಡ್ಡಪೇಟೆಯಲ್ಲಿ ವಿನಾಯಕ ಮಹೋತ್ಸವ

ದೊಡ್ಡಪೇಟೆಯಲ್ಲಿರುವ ಶ್ರೀ ವಿನಾಯಕ ದೇವಸ್ಥಾನ ಸೇವಾ ಸಂಘ ಟ್ರಸ್ಟ್ ಆಶ್ರಯದಲ್ಲಿ ಶ್ರೀ ವಿನಾಯಕ ಸ್ವಾಮಿ ದೇವಸ್ಥಾನದಲ್ಲಿ ವಿನಾಯಕ ಮಹೋತ್ಸವ ನಡೆಯುತ್ತಿದೆ. ಇಂದು ರಾತ್ರಿ 7.30 ರಿಂದ 'ದಕ್ಷಯಜ್ಞ' ಯಕ್ಷಗಾನ ಪ್ರದರ್ಶನ ಘಾಟಕ್ ಯಕ್ಷ ಸಂಸ್ಕೃತಿ ಟ್ರಸ್ಟ್ (ಬೆಂಗಳೂರು) ಇವರಿಂದ ನಡೆಯುವುದು. ಹಿಮ್ಮೇಳ : ಭಾಗವತರು : ಅನಂತ ಹೆಗಡೆ, ದಂತಳಿಗೆ ಮದ್ದಲೆ : ಎ.ಪಿ. ಘಾಟಕ್ (ಕಾರ್ಕಳ), ಚಂಡೆ : ಶ್ರೀನಿವಾಸ ಪ್ರಭು. ಮುಮ್ಮೇಳ : ಕೃಷ್ಣಮೂರ್ತಿ ತುಂಗ, ಅಜಿತ್ ಕಾರಂತ್, ರವಿ ಮಡೋಡಿ, ಶ್ರೀಮತಿ ಅಶ್ವಿನಿ ಕೊಂಡದಕುಳಿ, ರವೀಶ್ ಹೆಗಡೆ ಐನಬೈಲ್, ಮಹೇಶ್‌ಕುಮಾರ್, ಕು. ಚಿತ್ಕಲಾ ತುಂಗ.

## ಎಲೆಬೇತೂರಿನಲ್ಲಿ ಬೆಲ್ಲದ ಗಣಪ



ದಾವ ಣಗೆರೆ, ಸೆ. 19 - ಎಲೆ ಬೇತೂರಿನ ಗ್ರಾಮ ಪಂಚಾಯಿತಿಯಲ್ಲಿ ಪರಿಸರ ಸ್ನೇಹಿ ಬೆಲ್ಲದ ಶ್ರೀ ಗಣಪತಿಯನ್ನು ಪ್ರತಿಷ್ಠಾಪಿಸಲಾಗಿದೆ.

## ಪಾಲಿಕೆ ನೌಕರ ಸಂಘದಿಂದ ಗಣೇಶೋತ್ಸವ



ದಾವಣಗೆರೆ, ಸೆ.19- ಮಹಾನಗರ ಪಾಲಿಕೆ ನೌಕರ ಸಂಘದಿಂದ ಶ್ರೀ ಗಣಪತಿಯನ್ನು ಪ್ರತಿಷ್ಠಾಪಿಸಲಾಗಿದೆ ಪಾಲಿಕೆಯ ಆಯುಕ್ತರಾದ ಶ್ರೀಮತಿ ರೇಣುಕಾ, ಕಂದಾಯ ವಿಭಾಗದ ಉಪ ಆಯುಕ್ತರಾದ ಶ್ರೀಮತಿ ಲಕ್ಷ್ಮಿ, ಪಾಲಿಕೆ ನೌಕರ ಸಂಘದ ಅಧ್ಯಕ್ಷ ಕೆ. ಎಸ್. ಗೋವಿಂದರಾಜು, ರಾಜ್ಯ ಪ್ರಧಾನ ಕಾರ್ಯದರ್ಶಿ ಟಿ.ಸಿ. ಬಸವರಾಜಯ್ಯ ಹಾಗೂ ಪಾಲಿಕೆಯ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು ಹಾಜರಿದ್ದರು.

# ಜಗಳೂರು : ಉಜ್ವಲ ಭವಿಷ್ಯ ರೂಪಿಸಿಕೊಳ್ಳಲು ವಿದ್ಯಾರ್ಥಿಗಳಿಗೆ ಸಲಹೆ

## ತಾ.ಮಟ್ಟದ ಕ್ರೀಡಾಕೂಟದಲ್ಲಿ ಶಾಸಕ ಬಿ.ದೇವೇಂದ್ರಪ್ಪ

ಜಗಳೂರು,ಸೆ.19- ವಿದ್ಯಾರ್ಥಿಗಳು ದುಶ್ಚಟಗಳಿಂದ ದೂರವಾಗಿ, ಆಸಕ್ತಿದಾಯಕ ಕ್ಷೇತ್ರಗಳಲ್ಲಿ ಉನ್ನತ ಸಾಧನೆ ಮಾಡಿ, ಉಜ್ವಲ ಭವಿಷ್ಯ ರೂಪಿಸಿಕೊಳ್ಳಬೇಕು ಎಂದು ಶಾಸಕ ಬಿ.ದೇವೇಂದ್ರಪ್ಪ ಕಿವಿ ಮಾತು ಹೇಳಿದರು.

ಪಟ್ಟಣದ ತಾಲ್ಲೂಕು ಕ್ರೀಡಾಂಗಣದಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಸಂಯುಕ್ತಾಶ್ರಯದಲ್ಲಿ ನಡೆದ ತಾಲ್ಲೂಕು ಮಟ್ಟದ ಕ್ರೀಡಾಕೂಟ ಉದ್ಘಾಟಿಸಿ ಅವರು ಮಾತನಾಡಿದರು.

ಮಾಜಿ ಶಾಸಕ ಗುರುಸಿದ್ದನಗೌಡ ಅವರ ಆಡಳಿತಾವಧಿಯಲ್ಲಿ ನಿರ್ಮಿಸಿರುವ ತಾಲ್ಲೂಕು ಕ್ರೀಡಾಂಗಣ ಮೂಲಭೂತ ಸೌಲಭ್ಯಗಳಿಂದ ವಂಚಿತವಾಗಿದ್ದು, ಮುಂದಿನ ದಿನಗಳಲ್ಲಿ ಕ್ರೀಡಾ ಸಚಿವರ ಬಳಿ ಮನವಿ ಮಾಡಿ, ಹೆಚ್ಚು ಅನುದಾನ ತರುವ ಮೂಲಕ ಒಳಾಂಗಣ ಮತ್ತು ಹೊರಾಂಗಣ ಮೈದಾನ, ಸಿಂಥೆಟಿಕ್ ಟ್ರ್ಯಾಕ್ ,ಸುತ್ತಲೂ ಗಿಡ ಮರಗಳು ಹಸಿರಿನಿಂದ ಕಂಗೊಳಿಸುವಂತೆ ಅಭಿವೃದ್ದಿ ಪಡಿಸುವುದಾಗಿ ಭರವಸೆ ವ್ಯಕ್ತಪಡಿಸಿದರು. ಕಳೆದುಕೊಂಡ ಸಂಪತ್ತನ್ನು ಗಳಿಸಬ ಹುದು. ಆದರೆ ಅನಾರೋಗ್ಯ ಪೀಡಿತರು ಆರೋಗ್ಯ ಪಡೆಯಲು ಅಸಾಧ್ಯ.ಸದೃಢ ದೇಹದಲ್ಲಿ ಸದೃಢ ಮನಸ್ಸು ಸಾಧ್ಯ ಎಂದರು.

ಕ್ರೀಡಾಕೂಟದಲ್ಲಿ ತಾಲೂಕಿನ ಪ್ರತಿ ಕಾಲೇಜುಗಳ ಕ್ರೀಡಾಪಟುಗಳು ತೀರ್ಪುಗಾರರ ಮಕ್ಕಳಿದ್ದಂತೆ. ತಮ್ಮ ತೀರ್ಪು ಪಾರದರ್ಶಕವಾಗಿರಲಿ. ಸೋಲು -ಗೆಲುವು ಒಂದು ನಾಣ್ಯದ ಎರಡು ಮುಖಗಳಿದ್ದಂತೆ. ಎರಡನ್ನೂ ಸಮಾನವಾಗಿ ಸ್ವೀಕರಿಸಬೇಕು ಎಂದು ಸಲಹೆ ನೀಡಿದರು.

ಪದವಿ ಪೂರ್ವ ಶಿಕ್ಷಣ ಇಲಾಖೆ ಜಿಲ್ಲಾ ಉಪನಿರ್ದೇಶಕ ಎಸ್.ಜಿ.ಕರಿಸಿದ್ದಪ್ಪ ಮಾತನಾಡಿ, ಬರದ ನಾಡಿನಲ್ಲಿ ಕ್ರೀಡಾ ಪ್ರತಿಭೆಗಳಿಗೆ ಕೊರತೆಯಿಲ್ಲ ಕ್ರೀಡಾ ಕ್ಷೇತ್ರದಲ್ಲಿ ರಾಜ್ಯ, ರಾಷ್ಟ್ರ ಮಟ್ಟದಲ್ಲಿ ಹೊರಹೊಮ್ಮಲಿ ಎಂದು ಶುಭ ಹಾರೈಸಿದರು.

ತಾಲೂಕಿನ ಸೊಕ್ಕೆ ಗ್ರಾಮದಲ್ಲಿ ಸರ್ಕಾರಿ ಪಿಯು ಕಾಲೇಜು ಆರಂಭಿಸಲು ಗ್ರಾಮಸ್ಥರು ಶಾಸಕರಿಗೆ ಮನವಿ ಸಲ್ಲಿಸಿದರು. ಈ ಮನವಿ ಸ್ವೀಕರಿಸಿದ ಶಾಸಕರು, ಗ್ರಾಮದಲ್ಲಿ ಸರಕಾರಿ ಪಿಯು ಕಾಲೇಜು ಆರಂಭಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳಲು ಜಿಲ್ಲಾ ಉಪನಿರ್ದೇಶಕ ಕರಿಸಿದ್ದಪ್ಪ ಅವರಿಗೆ ಸೂಚಿಸಿದರು.

ಸಂದರ್ಭದಲ್ಲಿ ಬಿಇಓ ಹಾಲಮೂರ್ತಿ, ವಿವಿಧ ಕಾಲೇಜುಗಳ ಪ್ರಾಂಶುಪಾಲರಾದ ಜಗದೀಶ್, ಪೊಲೀಸ್ ವೃತ್ತ ನಿರೀಕ್ಷಕ ಶ್ರೀನಿವಾಸ್ ರಾವ್, ಪ.ಪಂ. ಸದಸ್ಯ ರಮೇಶ್ ರೆಡ್ಡಿ, ಉಪನ್ಯಾಸಕರಾದ ಎ.ಎಲ್. ತಿಪ್ಪೇಸ್ವಾಮಿ, ಮಂಜುನಾಥ ರೆಡ್ಡಿ, ಕರಿಬಸಪ್ಪ, ಎ.ಪಿ.ನಿಂಗಪ್ಪ, ಮುಖಂಡರಾದ ಓಮಣ್ಣ, ಪಲ್ಲಾಗಟ್ಟೆ ಶೇಖರಪ್ಪ, ಚಿತ್ತಪ್ಪ ಮುಂತಾದವರು ಇದ್ದರು.





# ಅಂಗಡಿ ಎಲ್.ಟಿ. ನಾರಾಯಣಪ್ಪ ನಿಧನ



ಜನನ : 17.01.1946 ನಿಧನ : 18.09.2023

ದಾವಣಗೆರೆ ಸಿದ್ಧವೀರಪ್ಪ ಬಡಾವಣೆ 5ನೇ ಕ್ರಾಸ್ ವಾಸಿ ತೊಗಟವೀರ ಸಮಾಜದ

**ಅಂಗಡಿ ಎಲ್.ಟಿ. ನಾರಾಯಣಪ್ಪ**

ಇವರು, ದಿನಾಂಕ 18.09.2023ರ ಸೋಮವಾರ ಬೆಳಿಗ್ಗೆ 8.40ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 77 ವರ್ಷ ವಯಸ್ಸಾಗಿತ್ತು. ಪತ್ನಿ, ಸೊಸೆ, ಓರ್ವ ಪುತ್ರಿ, ಅಳಿಯ, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 18.09.2023ರ ಸೋಮವಾರ ಸಂಜೆ 6 ಗಂಟೆಗೆ ಪಿ.ಬಿ.ರಸ್ತೆಯ ವೈಕುಂಠಧಾಮದಲ್ಲಿ ನೆರವೇರಿಸಲಾಯಿತು.

**ದುಃಖತಪ್ತ ಕುಟುಂಬ ವರ್ಗ :** ಪತ್ನಿ : ಲೀಲಾವತಿ, ಸೊಸೆ : ಸರಸ್ವತಿ ಮತ್ತು ಮೊಮ್ಮಕ್ಕಳು

- ಶ್ರೀಮತಿ ಲಕ್ಷ್ಮಿದೇವಿ, ಶ್ರೀ ಎಲ್.ಟಿ. ಗಿರಿಧರ್ ಮತ್ತು ಕುಟುಂಬದವರು
- ಶ್ರೀಮತಿ ವಿಜಯಲಕ್ಷ್ಮಿ ಅಂಗಡಿ ಎಲ್.ಟಿ. ದ್ವಾರಕ್‌ನಾಥ್‌ರವರು ಮತ್ತು ಕುಟುಂಬದವರು
- ಶ್ರೀಮತಿ ಸರೋಜಮ್ಮ ಅಂಗಡಿ ಎಲ್.ಟಿ. ಜಗನ್ನಾಥ್‌ರವರು ಮತ್ತು ಕುಟುಂಬದವರು
- ಶ್ರೀಮತಿ ಕೃಷ್ಣವೇಣಿ ಎಲ್.ಟಿ. ನಾಗಶಯನ ಮತ್ತು ಕುಟುಂಬದವರು
- ಶ್ರೀಮತಿ ಶಶಿಕಲಾ ಎಲ್.ವಿ. ಶ್ರೀನಿವಾಸ ಮತ್ತು ಕುಟುಂಬದವರು
- ಶ್ರೀಮತಿ ಶೃತಿ ಎಲ್.ಸಿ. ಗೋವರ್ಧನ್ ಮತ್ತು ಎಲ್.ಸಿ. ನಾಗಾರ್ಜುನ
- ಶ್ರೀಮತಿ ಅಶ್ವತ್ಥಮ್ಮ ಡಾ.ರಂಗನಾಥ್ ಕುಟುಂಬದವರು • ಶ್ರೀಮತಿ ಅನುಸೂಯ ಶ್ರೀ ಡಿ. ರಾಜಣ್ಣ, ಬೆಂಗಳೂರು
- ಶ್ರೀಮತಿ ಲಕ್ಷ್ಮಿ ಅನಿಲ್ ಬೆಂಗಳೂರು • ಶ್ರೀಮತಿ ರಮಾದೇವಿ ಜಿ. ಗೋವಿಂದರಾಜ್, ಹೈದರಾಬಾದ್
- ಶ್ರೀಮತಿ ಗಾಯತ್ರಿ ಕೆ.ಚಿದಾನಂದ, ಬೆಂಗಳೂರು ಮತ್ತು ಎಲ್ಲಾ ಅಂಗಡಿ ಮನೆತನದವರು ಹಾಗೂ ಬಂಧು-ಬಳಗ.



## ನಗರದಲ್ಲಿ ಅಪರಿಚಿತನ ಶವ ಪತ್ತೆ



ದಾವಣಗೆರೆ, ಸೆ.20- ನಗರದ ತರಕಾರಿ ಮಾರಾಟ ಮಾಡುವ ಮಳಿಗೆ ನಂ.35 ಬ್ಲಾಕ್‌ನಲ್ಲಿ ಭಿಕ್ಷೆ ಬೇಡುತ್ತಿದ್ದ ಸುಮಾರು 40-45 ವರ್ಷದ ಅಪರಿಚಿತನ ಶವವು ಮೊನ್ನೆ ಪತ್ತೆಯಾಗಿದೆ. ಎಣ್ಣೆ ಗೆಂಪು ಬಣ್ಣ ಹೊಂದಿದ್ದು, ತೆಳು ಮೈಕಟ್ಟು, ದುಂಡು ಮುಖ ಹೊಂದಿರುತ್ತಾನೆ. ಮೃತನು ಬಿಳಿ ಚೆಕ್ಸ್ ಷರ್ಟ್, ಕಪ್ಪು ಬಣ್ಣದ ಪ್ಯಾಂಟ್ ಧರಿಸಿರುತ್ತಾನೆ. ಸಂಬಂಧಪಟ್ಟವರು ಕೆಟಿಜೆ ನಗರ ಪೊಲೀಸ್ ಠಾಣೆ (ದೂರವಾಣಿ 08192-259293, 229285) ಯನ್ನು ಸಂಪರ್ಕಿಸಬಹುದು.



### ಸೈಯದ್ ಅಲ್ತಾಫ್ ನಿಧನ



ಹರಿಹರ ಪ್ರಶಾಂತನಗರದ ಮೊದಲನೇ ಮೇನ್ ಮೊದಲನೇ ಕ್ರಾಸಿನ ವಾಸಿ, ಜಯಲಕ್ಷ್ಮಿ ಟ್ರಾನ್ಸ್‌ಪೋರ್ಟ್‌ನ ಸೈಯದ್ ಅಲ್ತಾಫ್ (70) ಅವರು ದಿನಾಂಕ 19.09.2023ರ ಮಂಗಳವಾರ ಮಧ್ಯಾಹ್ನ 1.20ರ ಸುಮಾರಿಗೆ ನಿಧನರಾದರು. ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆಯು ದಿನಾಂಕ 20.09.2023ರ ಬುಧವಾರ ಬೆಳಗ್ಗೆ 11.30ಕ್ಕೆ ದಾವಣಗೆರೆಯ ಪಿ.ಬಿ. ರಸ್ತೆಯಲ್ಲಿನ ಹಳೇ ಖಬರಸ್ತಾನದಲ್ಲಿ ನಡೆಯಲಿದೆ.

### ಸವಿತಾ ಸಮಾಜದ ಪೆದ್ದಹೋತೂರು ಬಸವರಾಜ್ ನಿಧನ



ದಾವಣಗೆರೆ ಸಿಟಿ ಹೊಂಡದ ವೃತ್ತ ಕೊಂಡಜ್ಜಿ ರಸ್ತೆ ವಾಸಿ ದಿ. ಭಜಂತ್ರಿ ನಾರಾಯಣಪ್ಪ ರವರ ಹಿರಿಯ ಪುತ್ರ ಸವಿತಾ ಸಮಾಜದ ಖಜಾಂಚಿ ಪೆದ್ದಹೋತೂರು ಬಸವರಾಜ್ (59) ಇವರು ದಿನಾಂಕ 19.09.2023ರ ಮಂಗಳವಾರ ಸಂಜೆ 6 ಕ್ಕೆ ನಿಧನರಾದರು. ಪತ್ನಿ, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 20.9.2023ರ ಬುಧವಾರ ಬೆಳಗ್ಗೆ 12 ಗಂಟೆಗೆ ನಗರದ ಬೂದಾಳ್ ರಸ್ತೆಯಲ್ಲಿರುವ ಸಾರ್ವಜನಿಕ ರುದ್ರಭೂಮಿಯಲ್ಲಿ ನೆರವೇರಲಿದೆ.



## ಸಾಲ ಬಾಧೆಗೆ ಮತ್ತೊಬ್ಬ ರೈತನ ಬಲಿ

ರಾಣೇಬೆನ್ನೂರು, ಸೆ.19- ಸಾಲ ಬಾಧೆಗೆ ಮುಷ್ಠೂರು ಗ್ರಾಮದ ರೈತ ಜಗದೀಶ ಶಿದ್ದಪ್ಪ ಜಾನಪ್ಪನವರ (36) ಇಂದು ಬಲಿಯಾಗಿದ್ದು, ವಾರದಲ್ಲಿ ಇಂತಹ 4-5 ಪ್ರಕರಣಗಳು ಜಿಲ್ಲೆಯಲ್ಲಿ ಜರುಗುತ್ತಿದ್ದರೂ ನಮಗೂ-ರೈತರಿಗೂ ಸಂಬಂಧವೇ ಇಲ್ಲ ಎನ್ನುವಂತೆ ಜಿಲ್ಲಾಡಳಿತ ವರ್ತಿಸುತ್ತಿರುವ ಮೂಲಕ ಗಾಢ ನಿದ್ರೆಯಲ್ಲಿದೆ ಎಂದು ರೈತ ಮುಖಂಡ ರವೀಂದ್ರ ಪಾಟೀಲ್ ಆರೋಪಿಸಿದರು.

ಆತ್ಮಹತ್ಯೆ ಮಾಡಿಕೊಂಡ ಮುಷ್ಠೂರ ಗ್ರಾಮದ ರೈತ ಜಗದೀಶ ಶಿ. ಜಾನಪ್ಪನವರ ಇವರ ಶವ ಸಂಸ್ಕಾರದ ಹತ್ತಿರ ಕುಟುಂಬಸ್ಥರು, ನಡೆಸುತ್ತಿದ್ದ ಪ್ರತಿಭಟನೆಯ ಸಂದರ್ಭದಲ್ಲಿ ಅವರು ಮಾತನಾಡಿದರು.

ಜಿಲ್ಲೆಯ ರೈತರ ಬಗೆಗಿನ ನಿರ್ಲಕ್ಷ್ಯ ಧೋರಣೆ, ಆತ್ಮಹತ್ಯೆ ಪ್ರಕರಣಗಳ ಬಗ್ಗೆ ಹಗುರವಾದ ತೀರ್ಮಾನ. ಅಂಕಿ-ಅಂಶಗಳ ಮರೆಮಾಚುವಿಕೆ. ಸರ್ಕಾರವನ್ನು ಮುಜುಗರಕ್ಕೀಡು ಮಾಡುತ್ತಿರುವ ಜಿಲ್ಲಾಧಿಕಾರಿಯನ್ನು ನ್ಯಾಯಾಲಯದ ಕಟಕಟೆಯಲ್ಲಿ ನಿಲ್ಲಿಸುತ್ತೇವೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ರೈತ ಮುಖಂಡರಾದ ದಿಳ್ಳೆಪ್ಪ ಗಂದಣ್ಣನವರ, ಬಸವರಾಜ ಯಲ್ಲಕ್ಕನವರ, ಪ್ರಶಾಂತರಡ್ಡಿ ಯರೇಕುಪ್ಪಿ, ಹರಿಹರಗೌಡ ಪಾಟೀಲ, ಮಲಕಪ್ಪ ಲಿಂಗದಹಳ್ಳಿ, ತಿಪ್ಪೇಶ ಕಡ್ಲಿಗುಂದಿ, ಶಾಂತವ್ವ ಹಿರೇಮಠದ, ಗಿರಿಜವ್ವ ನಾಯಕ, ಸೋಮಶೇಖರ ಜಾನಪ್ಪನವರ ಮುಂತಾದವರು ಭಾಗವಹಿಸಿದ್ದರು.




## ಹರಿಹರದಲ್ಲಿ ಪರಿಸರಸ್ನೇಹಿ ಗಣಪ

ಹರಿಹರ, ಸೆ. 19 - ನಡವಲ ಪೇಟೆ ಯುವಕ ಸಂಘದಿಂದ ಪರಿಸರ ಸ್ನೇಹಿ ಗಣೇಶ ಮೂರ್ತಿ ಪ್ರತಿಷ್ಠಾಪಿಸಲಾಗಿದೆ. ಈ ಸಂದರ್ಭದಲ್ಲಿ ಸಮಿತಿ ಮುಖಂಡರಾದ ದುರಗೋಜಿ ಮಹೋನ್, ಮಹೇಂದ್ರಕರ್ ಜಗದೀಶ್, ಸತ್ಯನಾರಾಯಣ, ರಾಕೇಶ್ ತೇಲ್ಕರ್, ರಾಘವೇಂದ್ರ ತೇಲ್ಕರ್, ಆಕಾಶ್ ಮಹೇಂದ್ರಕರ್, ಗಣೇಶ ಪೈ, ಕಿರಣ್ ಮೇಗೋಟಿ, ಬಿ.ಎಸ್. ಕಿರಣ್, ದಿಪಕ್ ಪಾಳಂಕರ್, ಗಂಗಾಧರ ದುರುಗೋಜಿ, ಆದಿತ್ಯ ಮತ್ತಿತರರು ಉಪಸ್ಥಿತರಿದ್ದರು.

## ನಿಟುವಳ್ಳಿಯಲ್ಲಿ ಗಣಪತಿ ಉತ್ಸವ


ಶ್ರೀ ದುರ್ಗಾಂಬಿಕಾ ದೇವಸ್ಥಾನ ಟ್ರಸ್ಟ್ ಆಶ್ರಯದಲ್ಲಿ ಇಂದಿನಿಂದ ಐದು ದಿನಗಳ ಕಾಲ ಶ್ರೀ ದುರ್ಗಾಂಬಿಕಾ ದೇವಸ್ಥಾನದ ಆವರಣದಲ್ಲಿ ಗಣೇಶೋತ್ಸವ ನಡೆಯಲಿದೆ. ಇಂದು ಮತ್ತು ನಾಳೆ ಬೆಳಿಗ್ಗೆ 9 ಗಂಟೆಗೆ ಮತ್ತು ಸಂಜೆ 6.30 ಕ್ಕೆ ಪೂಜಾ ಸೇವೆಗಳು ನಡೆಯುವವು. ನಾಳೆ ಗುರುವಾರ ಮಧ್ಯಾಹ್ನ 12 ಗಂಟೆಗೆ ಅನ್ನ ಸಂತರ್ಪಣೆ ನಡೆಯುವುದು.

KA/SK/CTA-275/2021-2023. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas

# ಮಳೆ ಕೊರತೆ : ಬರದಿಂದ ಕೃಷಿಗೆ ನಷ್ಟ

## 6 ಸಾವಿರ ಕೋಟಿ ರೂ. ನೆರವಿಗಾಗಿ ಕೇಂದ್ರಕ್ಕೆ ಮನವಿ: ಕೃಷ್ಣ ಭೈರೇಗೌಡ

ಬೆಂಗಳೂರು, ಸೆ.19 - ಮುಂಗಾರು ಮಳೆ ಕೊರತೆಯಿಂದ 44 ಲಕ್ಷ ಹೆ.ಪ್ರದೇಶದಲ್ಲಿ ಕೃಷಿ ಹಾಗೂ ತೋಟಗಾರಿಕೆ ಬೆಳೆ ನಷ್ಟವಾಗಿದ್ದು, ಪರಿಹಾರಕ್ಕಾಗಿ 6 ಸಾವಿರ ಕೋಟಿ ರೂ. ನೆರವು ನೀಡುವಂತೆ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸುವುದಾಗಿ ಕಂದಾಯ ಸಚಿವ ಕೃಷ್ಣ ಭೈರೇಗೌಡ ತಿಳಿಸಿದ್ದಾರೆ.



ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 42 ಲಕ್ಷ ಹೆ.ಕೃಷಿ ಬೆಳೆ ಹಾಗೂ 2 ಲಕ್ಷ ಹೆ. ತೋಟಗಾರಿಕೆ ಬೆಳೆ ಇದು ವರೆಗೂ ನಷ್ಟವಾಗಿದೆ. ಮುಂದಿನ ದಿನಗಳಲ್ಲಿ ಇದರ ಪ್ರಮಾಣ ಹೆಚ್ಚಬಹುದು ಎಂದರು.

ಹಾಲಿ 195 ತಾಲ್ಲೂಕುಗಳ ಜತೆಗೆ ಮತ್ತಷ್ಟು ತಾಲ್ಲೂಕುಗಳು ತಿಂಗಳಾಂತ್ಯ ಬರಪೀಡಿತ ತಾಲ್ಲೂಕುಗಳೆಂಬ ಘೋಷಣೆಗೆ ಒಳಪಡುತ್ತವೆ.

ಬರ ಪರಿಹಾರದ ನೆರವು ಕೋರಿ ಕೇಂದ್ರ ಸರ್ಕಾರಕ್ಕೆ ಇನ್ನೊಂದು ವಾರದಲ್ಲಿ ಮನವಿ ಸಲ್ಲಿಸಲಾಗುವುದು. ಘೋಷಿತ ತಾಲ್ಲೂಕು ಗಳಲ್ಲಿ ಬರ ಪರಿಹಾರ ಕಾರ್ಯಗಳಿಗೆ ಕೇಂದ್ರದ ಮಾರ್ಗಸೂಚಿ ಪ್ರಕಾರ ವರದಿ ನೀಡಲು ಕೃಷಿ, ತೋಟಗಾರಿಕೆ, ಪಶುಸಂಗೋಪನೆ ಹಾಗೂ ಗ್ರಾಮೀಣಾಭಿವೃದ್ಧಿ ಇಲಾಖೆ ಸೂಚಿಸಲಾಗಿತ್ತು.

ಆಯಾ ಇಲಾಖೆಗಳು ಕರಡು ವರದಿ ಸಲ್ಲಿಸಿದ್ದನ್ನು ಇಂದು ಹಿರಿಯ ಅಧಿಕಾರಿಗಳೊಂದಿಗೆ ಪರಿಶೀಲಿಸಲಾಗಿದ್ದು, ಕೆಲವೊಂದು ಸಣ್ಣ-ಪುಟ್ಟ ಬದಲಾವಣೆಗಳೊಂದಿಗೆ ನಾಲ್ಕೈದು ದಿನಗಳಲ್ಲಿ ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಿರುವ ಮನವಿ ಪತ್ರ ಸಿದ್ಧವಾಗಲಿದೆ ಎಂದು ಅವರು ಹೇಳಿದರು.

ಮನವಿ ಪತ್ರ ಸಿದ್ಧಪಡಿಸಿದ ಬಳಿಕ ಸಂಪುಟ ಸಭೆ ಒಪ್ಪಿಗೆ ಪಡೆದು ವಾರದೊಳಗೆ ಮಾರ್ಗಸೂಚಿ ಪ್ರಕಾರ ನೆರವು ಕೋರಿ ಮನವಿ ಪತ್ರ ಸಲ್ಲಿಸಲಾಗುವುದು. ಉಳಿದಿರುವ 41 ತಾಲ್ಲೂಕುಗಳಲ್ಲಿ ಮಳೆ ಕೊರತೆ ಇದೆ. ಶಾಸಕರು ಬರಪೀಡಿತ ಪಟ್ಟಿಗೆ ಸೇರ್ಪಡೆ ಮಾಡುವಂತೆ ಒತ್ತಡ ಹಾಕುತ್ತಿದ್ದಾರೆ. ಆದರೂ ಕೇಂದ್ರದ ಮಾರ್ಗಸೂಚಿ ಪ್ರಕಾರ ಪರಿಶೀಲಿಸಿ, ಅರ್ಹವಾಗುವ ತಾಲ್ಲೂಕುಗಳ ಎರಡನೇ ಪಟ್ಟಿಯನ್ನು ಈ ತಿಂಗಳ ಅಂತ್ಯದೊಳಗೆ ಘೋಷಣೆ ಮಾಡಲಾಗುವುದು ಎಂದರು.

ಕೇರಳ, ಜಾರ್ಖಂಡ್, ಪಶ್ಚಿಮ ಬಂಗಾಳ, ಅಸ್ಸಾಂ ಸೇರಿದಂತೆ ಹಲವು ರಾಜ್ಯಗಳಲ್ಲಿ ಮಳೆ ಕೊರತೆ ಇದೆ. ಆ ರಾಜ್ಯಗಳು ಇನ್ನೂ ಬರಪೀಡಿತ ಪ್ರದೇಶಗಳನ್ನು ಘೋಷಿಸಿಲ್ಲ. ರಾಜ್ಯ ಸರ್ಕಾರ ಆದ್ಯತೆ ನೀಡಿ ಇತರೆ ರಾಜ್ಯಗಳಿಗಿಂತ ಮುಂಚೆ ಬರ ಘೋಷಣೆ ಮಾಡಿದೆ.

ಕೃಷಿ ಇಲಾಖೆ ವ್ಯಾಪ್ತಿಯ 40 ಲಕ್ಷ ಹೆ. ಪ್ರದೇಶದಲ್ಲಿ ಬೆಳೆ ಹಾನಿಯಾಗಿದ್ದು, 4 ಸಾವಿರ ಕೋಟಿ ರೂ. ಪರಿಹಾರ ಕೋರಬಹುದಾಗಿದೆ. 2 ಲಕ್ಷ ಹೆ. ಪ್ರದೇಶದ ತೋಟಗಾರಿಕೆ ಬೆಳೆ ಹಾನಿಯಾಗಿದ್ದು, ಮಾರ್ಗ ಸೂಚಿ ಪ್ರಕಾರ 200 ಕೋಟಿ ರೂ. ಪರಿಹಾರ ಕೋರಬಹುದಾಗಿದೆ.

ಇದಲ್ಲದೆ ಜಾನುವಾರು ಮೇವು, ಕುಡಿಯುವ ನೀರು, ಉದ್ಯೋಗ ಸೇರಿದಂತೆ ಮಾರ್ಗಸೂಚಿ ಪ್ರಕಾರ ಸುಮಾರು ಆರು ಸಾವಿರ ಕೋಟಿ ರೂ.ಗೆ ಮನವಿ ಸಿದ್ಧಪಡಿಸಿ ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗುವುದು ಎಂದು ಅವರು ಹೇಳಿದರು.

### ಅ.1ರಿಂದ ಸ್ಥಿರಾಸ್ತಿ ಮಾರ್ಗಸೂಚಿ ದರ ಶೇ.30ರಷ್ಟು ಹೆಚ್ಚಳ

ರಾಜ್ಯದಲ್ಲಿ ಅಕ್ಟೋಬರ್ ಒಂದರಿಂದ ಸ್ಥಿರಾಸ್ತಿ ನೋಂದಣಿ ಮಾರ್ಗಸೂಚಿ ದರ ಪರಿಷ್ಕರಣೆಯಾಗಲಿದ್ದು, ಸರಾಸರಿ ಶೇ. 30 ರಷ್ಟು ಹೆಚ್ಚಳವಾಗಲಿದೆ ಎಂದು ಕಂದಾಯ ಸಚಿವ ಕೃಷ್ಣ ಭೈರೇಗೌಡ ತಿಳಿಸಿದ್ದಾರೆ.

ಪ್ರತಿವರ್ಷ ಆಸ್ತಿ ನೋಂದಣಿ ಮಾರ್ಗಸೂಚಿ ದರ ಪರಿಷ್ಕರಣೆ ಮಾಡಬೇಕು ಎಂಬ ನಿಯಮ ಇದೆ. ಪರಿಷ್ಕರಣೆಯಾದರೂ ಎಲ್ಲಾ ಕಡೆ ಮಾರ್ಗಸೂಚಿ ದರ ಏರಿಕೆ ಆಗಲ್ಲ. ಮಾರುಕಟ್ಟೆ ದರಕ್ಕಿಂತ ಮಾರ್ಗಸೂಚಿ ದರ ಹೆಚ್ಚಳವಿರುವ ಕಡೆಗಳಲ್ಲಿ ಮಾರ್ಗಸೂಚಿ ದರ ಹೆಚ್ಚಳವಾಗುವುದಿಲ್ಲ ಎಂದರು.

ಆದರೆ, ಮಾರುಕಟ್ಟೆ ದರಕ್ಕಿಂತ ಬಹಳ ಕಡಿಮೆ ಮಾರ್ಗಸೂಚಿ ದರವಿರುವ ಕಡೆಗಳಲ್ಲಿ ಖಂಡಿತಾ ಹೆಚ್ಚಳ ಆಗಲಿದೆ. ಏರಿಕೆ ಬಗ್ಗೆ ಆಕ್ಷೇಪಣೆ ಸಲ್ಲಿಸಲು ಅವಕಾಶ ಇದೆ. ಆಕ್ಷೇಪಣೆ ಪರಿಶೀಲಿಸಿದ ಬಳಿಕ ಮಾರ್ಗಸೂಚಿ ದರ ಪರಿಷ್ಕರಣೆ ಅಧಿಸೂಚನೆ ಪ್ರಕಟವಾಗಲಿದೆ ಎಂದವರು ತಿಳಿಸಿದರು. ಮಾರ್ಗಸೂಚಿ ದರ ಏರಿಕೆಯಾದರೆ ವರ್ಷಕ್ಕೆ 2000 ಕೋಟಿ ರೂ. ಆದಾಯ ಬರಲಿದೆ. ದರ ಏರಿಕೆಯಿಂದ ಒಂದಷ್ಟು ವ್ಯತ್ಯಾಸ ಆಗಬಹುದು. ಅದು ಎರಡು ತಿಂಗಳ ಬಳಿಕ ಸರಿ ಆಗಲಿದೆ ಎಂದರು.

ಮಾರ್ಗಸೂಚಿ ದರ ಪ್ರತಿವರ್ಷ ಏರಿಕೆ ಮಾಡಬೇಕು ಎಂಬುದು ಕಾಯಿದೆಯಲ್ಲಿದೆ. ಕಳೆದ 5 ವರ್ಷಗಳಿಂದ ಮಾರ್ಗಸೂಚಿ ದರ ಏರಿಕೆ ಆಗಿರಲಿಲ್ಲ. ಅದಕ್ಕೆ ನಾವು ಈಗ ಮಾಡುತ್ತಿದ್ದೇವೆ ಎಂದು ಸಚಿವರು ಸ್ಪಷ್ಟನೆ ನೀಡಿದರು.

# ಇನ್ನೆರಡು ದಿನದಲ್ಲಿ ಭದ್ರಾ ನೀರಿನ ವಿಚಾರ ತೀರ್ಮಾನ : ಡಿಸಿಎಂ ಡಿ.ಕೆ. ಶಿವಕುಮಾರ್

## ಸತತವಾಗಿ ನೀರು ಹರಿಸುವಂತೆ ಎಸ್ಸೆಸ್ಸೆಂ ಹಾಗೂ ಶಾಸಕರ ಪಟ್ಟು



ಬೆಂಗಳೂರು, ಸೆ.19- ಭದ್ರಾ ನಾಲೆಯ ನೀರಿನ ವಿಚಾರವಾಗಿ ಮಂಗಳವಾರ ಬೆಂಗಳೂರಿನಲ್ಲಿ ನಡೆದ ಸಭೆ ಅಪೂರ್ಣವಾಗಿದ್ದು, ಇನ್ನೆರೆಡು ದಿನಗಳಲ್ಲಿ ತೀರ್ಮಾನ ಹೇಳುವುದಾಗಿ ಜಲಸಂಪನ್ಮೂಲ ಸಚಿವರೂ ಆದ ಡಿಸಿಎಂ ಡಿ. ಕೆ.ಶಿವಕುಮಾರ್ ಹೇಳಿದ್ದಾರೆ.

ಮೊದಲಿಗೆ ವಿಕಾಸಸೌಧದಲ್ಲಿ ನಿಗದಿಯಾಗಿದ್ದ ಸಭೆ ಕಾರಣಾಂತರಗಳಿಂದಾಗಿ ಡಿ.ಕೆ.ಶಿವಕುಮಾರ್ ಅವರ ಗೃಹ ಕಚೇರಿಯಲ್ಲೇ ನಡೆಯಿತು.

ಸಭೆಯಲ್ಲಿ ದಾವಣಗೆರೆ ಜಿಲ್ಲಾ ಉಸ್ತುವಾರಿ ಸಚಿವ ಶಾಮನೂರು ಮಲ್ಲಿಕಾರ್ಜುನ್ ಅವರು, ಅಚ್ಚುಕಟ್ಟಿನಲ್ಲಿ ಬಹಳಷ್ಟು ರೈತರು ಭತ್ತದ ನಾಟಿ ಮಾಡಿರುವುದರಿಂದ ಭತ್ತದ ಉಳಿವಿಗಾಗಿ ನಾಲೆಯಲ್ಲಿ ಸತತವಾಗಿ ನೀರು ಹರಿಸಬೇಕೆಂಬ ವಾದ ಮಂಡಿಸಿದರು.

ಶಿವಮೊಗ್ಗ ಜಿಲ್ಲಾ ಉಸ್ತುವಾರಿ ಸಚಿವ ಮಧು ಬಂಗಾರಪ್ಪ ಅವರು, ಭದ್ರಾ ಜಲಾಶಯದಲ್ಲಿ ನೀರಿನ ಪ್ರಮಾಣ ಕಡಿಮೆ ಇರುವುದರಿಂದ ಆಫ್ ಅಂಡ್ ಆನ್ ಪದ್ಧತಿಯಲ್ಲಿ ನೀರು ಹರಿಸುವ ಅನಿವಾರ್ಯತೆ ಇದೆ. ಹಾಗಾಗಿ ಮಂಗಳವಾರ ಬೆಳಿಗ್ಗೆ ನಾಲೆಯಲ್ಲಿ ನೀರು ಬಂದ್ ಮಾಡಲಾಗಿದೆ ಎಂದರು.

ಶಾಸಕರುಗಳಾದ ಬಿ.ಪಿ.ಹರೀಶ್, ಡಿ.ಜಿ. ಶಾಂತನಗೌಡ್ರು, ಶಿವಗಂಗಾ ಬಸವರಾಜ್, ಕೆ. ಎಸ್.ಬಸವಂತಪ್ಪ, ಶ್ರೀಮತಿ ಲತಾ ಮಲ್ಲಿಕಾರ್ಜುನ್, ಮಾಜಿ ಶಾಸಕ ಎಸ್.ರಾಮಪ್ಪ, ಭದ್ರಾ ನೀರು ಬಳಕೆದಾರರ ಸಹಕಾರ ಸಂಘಗಳ ಮಹಾಮಂಡಳದ ಅಧ್ಯಕ್ಷ ವೈ.ದ್ಯಾವಪ್ಪರೆಡ್ಡಿ, ಮುಖಂಡರಾದ ನಂದಿಗಾವಿ ಶ್ರೀನಿವಾಸ್, ಮುದೇಗೌಡ್ರ ತಿಪ್ಪೇಶ್ ಮತ್ತಿತರರು ಭದ್ರಾ ನಾಲೆಯಲ್ಲಿ ಆಫ್ ಅಂಡ್ ಆನ್ ಮಾಡದೇ, ನಿತ್ಯ 2000 ಸಾವಿರ ಕ್ಯೂಸೆಕ್ಸ್‌ನಂತೆ ಸತತವಾಗಿ ನೀರು ಹರಿಸಿ ಎಂದು ಒತ್ತಾಯಿಸಿದರು ಎನ್ನಲಾಗಿದೆ.

ದೆಹಲಿಗೆ ಹೋಗುವ ತರಾತುರಿಯಲ್ಲಿದ್ದ ಡಿಸಿಎಂ ಶಿವಕುಮಾರ್ ಅವರು, ನಿಮ್ಮ ಅಭಿಪ್ರಾಯವನ್ನು ಪತ್ರ ಮುಖೇನ ನನಗೆ ಕೊಡಿ, ಅಧಿಕಾರಿಗಳಿಂದ ವಾಸ್ತವ ಪರಿಸ್ಥಿತಿ ತಿಳಿದುಕೊಂಡು ಒಂದೆರಡು ದಿನಗಳಲ್ಲಿ ತೀರ್ಮಾನ ಹೇಳುತ್ತೇನೆಂದು ಸಭೆಯನ್ನು ಮೊಟಕುಗೊಳಿಸಿದರೆಂದು ಸಭೆಯಲ್ಲಿದ್ದವರು 'ಜನತಾವಾಣಿ'ಗೆ ತಿಳಿಸಿದರು.

ಕರ್ನಾಟಕ ನೀರಾವರಿ ನಿಗಮದ ಎಂ.ಡಿ. ಮಲ್ಲಿಕಾರ್ಜುನ್ ಗುಂಗೆ ಸೇರಿದಂತೆ, ನೀರಾವರಿ ಇಲಾಖೆ ಅಧಿಕಾರಿಗಳು ಸಭೆಯಲ್ಲಿದ್ದರು.

**ನಾಲೆಯಲ್ಲಿ ನೀರು ಬಂದ್ :** ಏತನ್ಮಧ್ಯೆ ಮಂಗಳವಾರ ಬೆಳಿಗ್ಗೆ ಭದ್ರಾವತಿ ಭಾಗದ ನಾಲೆಯಲ್ಲಿ ನೀರು ಬಂದ್ ಮಾಡುವಂತೆ ಪಟ್ಟು ಹಿಡಿದಿದ್ದರಿಂದ ಬಲದಂಡೆ ನಾಲೆಗೆ ಹರಿಸಲಾಗುತ್ತಿದ್ದ ನೀರನ್ನು ಬಂದ್ ಮಾಡಲಾಗಿದೆ.

ಈ ವಿಷಯ ತಿಳಿದ ಅಚ್ಚುಕಟ್ಟಿನ ರೈತರು, ದಾವಣಗೆರೆ ಮತ್ತು ಮಲೇಬೆನ್ನೂರಿನಲ್ಲಿ ಪ್ರತಿಭಟನೆ ನಡೆಸಿ, ಸತತವಾಗಿ ನೀರು ಹರಿಸುವಂತೆ ಆಗ್ರಹಿಸಿದ್ದಾರೆ.

**ಪ್ರತಿಭಟನೆಗೆ ಕರೆ :** ಯಾರಿಗೂ ಹೇಳದೆ, ಕೇಳದೇ ಭದ್ರಾ ನಾಲೆಯಲ್ಲಿ ನೀರು ಬಂದ್ ಮಾಡಿರುವುದರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿರುವ ಶಾಸಕ ಬಿ.ಪಿ.ಹರೀಶ್ ಅವರು, ಬುಧವಾರ ದಾವಣಗೆರೆ ಮತ್ತು ಮಲೇಬೆನ್ನೂರಿನಲ್ಲಿ ರೈತರ ಬೃಹತ್ ಪ್ರತಿಭಟನೆಗೆ ಕರೆ ನೀಡಿದ್ದಾರೆ ಎನ್ನಲಾಗಿದೆ. ನಾಲೆಯಲ್ಲಿ ಸತತವಾಗಿ ನೀರು ಹರಿಸದಿದ್ದರೆ, ಹೋರಾಟ ತೀವ್ರಗೊಳಿಸುವುದಾಗಿ ಹರೀಶ್ ಅವರು ತಿಳಿಸಿದ್ದಾರೆ.

# ಕೆನಡಾದ ಭಾರತ ರಾಯಭಾರಿ ಉಚ್ಚಾಟನೆ

ನವದೆಹಲಿ, ಸೆ. 19 – ಭಾರತ ಹಾಗೂ ಕೆನಡಾ ನಡುವಿನ ಸಂಬಂಧ ಮತ್ತಷ್ಟು ಹದಗೆಟ್ಟಿದ್ದು, ಭಾರತದ ರಾಯಭಾರಿಯೊಬ್ಬರನ್ನು ಕೆನಡಾ ಉಚ್ಚಾಟಿಸಿದೆ. ಇದಕ್ಕೆ ಪ್ರತಿಯಾಗಿ ಕೆನಡಾದ ಹಿರಿಯ ರಾಯಭಾರಿಯನ್ನು ಭಾರತ ಉಚ್ಚಾಟಿಸಿದೆ. ಹಿರಿಯ ಅಧಿಕಾರಿಯನ್ನು ಉಚ್ಚಾಟಿಸಿರುವ ಬಗ್ಗೆ ಭಾರತದಲ್ಲಿರುವ ಕೆನಡಾದ ಉಚ್ಚಾಯುಕ್ತ ಕ್ಯಾಮರಾನ್ ಮೆಕೇ ಅವರಿಗೆ ತಿಳಿಸಲಾಗಿದೆ. ಕೆನಡಾದ ರಾಯಭಾರಿಗಳು ಭಾರತದ ಆಂತರಿಕ ವಿಷಯದಲ್ಲಿ ಮಧ್ಯ ಪ್ರವೇಶಿಸುತ್ತಿರುವ ಹಾಗೂ ಭಾರತ ವಿರೋಧಿ ಚಟುವಟಿಕೆಗಳಲ್ಲಿ ಭಾಗಿಯಾಗುತ್ತಿರುವ ಬಗ್ಗೆ ಭಾರತ ಆಕ್ಷೇಪವನ್ನೂ ವ್ಯಕ್ತಪಡಿಸಿದೆ.

ಕೆನಡಾದಲ್ಲಿ ಖಲಿಸ್ತಾನಿ ಉಗ್ರವಾದಿಗಳು ಹಾಗೂ ತೀವ್ರವಾದಿಗಳಿಗೆ ಆಶ್ರಯ ನೀಡಲಾಗುತ್ತಿದೆ. ಭಾರತದ ಸಾರ್ವಭೌಮತ್ವಕ್ಕೆ ಬೆದರಿಕೆ ಹಾಕಲಾಗುತ್ತಿದೆ ಎಂದು ವಿದೇಶಾಂಗ ಇಲಾಖೆ ತಿಳಿಸಿದೆ.

ಕೆನಡಾ ಖಲಿಸ್ತಾನಿ ನಾಯಕ ಹರ್‌ದೀಪ್ ಸಿಂಗ್ ನಿಜ್ಜರ್ ಎಂಬಾತನನ್ನು ಇಬ್ಬರು ಬಂದೂಕುಧಾರಿಗಳು ಕಳೆದ ಜೂನ್‌ನಲ್ಲಿ ಸುರ್ರೆಯಲ್ಲಿ ಹತ್ಯೆಗೈದಿದ್ದರು. ಈ ಪ್ರಕರಣದಲ್ಲಿ ಭಾರತದ ಉನ್ನತ ರಾಯಭಾರಿ ಸಂಪರ್ಕ ಹೊಂದಿರುವುದಾಗಿ ಕೆನಡಾ ಆರೋಪಿಸಿ, ಅವರನ್ನು ಉಚ್ಚಾಟಿಸಿರುವುದಾಗಿ ತಿಳಿಸಿತ್ತು. ಭಾರತ ಈ ಆರೋಪವನ್ನು ಅಸಂಗತ ಹಾಗೂ ಆಧಾರ ರಹಿತ ಎಂದು ತಳ್ಳಿ ಹಾಕಿದೆ.

# ಶಿಕ್ಷಕರಿಗೆ ಕರೋಕೆ ಗಾಯನ ಸ್ಪರ್ಧೆ

ದಾವಣಗೆರೆ, ಸೆ.19- ಜ್ಞಾನ ಸೌರಭ ಕಲ್ಚರಲ್ ಅಂಡ್ ಎಜ್ಯುಕೇಷನಲ್ ಟ್ರಸ್ಟ್ ವತಿಯಿಂದ ಶಿಕ್ಷಕರಿಗೆ ಜಿಲ್ಲಾ ಮಟ್ಟದ ಕನ್ನಡ ಸೋಲೋ ಚಿತ್ರಗೀತೆಗಳ ಕರೋಕೆ ಗಾಯನ ಸ್ಪರ್ಧೆ ಹಾಗೂ ಉತ್ತಮ ಶಿಕ್ಷಕ ಮತ್ತು ಶಿಕ್ಷಕಿಯರಿಗೆ ಸನ್ಮಾನ ಕಾರ್ಯಕ್ರಮವನ್ನು ಇದೇ ದಿನಾಂಕ 23ರಂದು ಬೆಳಿಗ್ಗೆ 10.30ಕ್ಕೆ ನಗರದ ಆರ್.ಹೆಚ್. ಗೀತಮಂದಿರದಲ್ಲಿ ಏರ್ಪಡಿಸಲಾಗಿದೆ.

ವಿವರಕ್ಕೆ ಮೊಬೈಲ್ : 8219607934, 9880686866 ಸಂಪರ್ಕಿಸುವಂತೆ ಟ್ರಸ್ಟ್‌ನ ಅಧ್ಯಕ್ಷ ಡಿ. ಮಹೇಶ್ವರಪ್ಪ ತಿಳಿಸಿದ್ದಾರೆ.


**ಶುಭಾಶಯಗಳು**



ವಿಘ್ನ ನಿವಾರಕ ಶ್ರೀ ಗಣೇಶ ಸರ್ವರಿಗೂ ಸನ್ಮಂಗಳವನ್ನು ಮಾಡಲಿ ಎಂದು ಆಶಿಸುತ್ತಾ, ನಮ್ಮೆಲ್ಲ ಬಂಧು-ಮಿತ್ರರಿಗೆ ಶ್ರೀಗೌರಿ- ಗಣೇಶ ಹಬ್ಬದ ಹಾರ್ದಿಕ ಶುಭಾಶಯಗಳು

ಡಿ. ಕೆ. ಸಂಗಮೇಶ್ ಎಲಿಗಾರ್
ಪತ್ರ ಬರಹಗಾರರು, ಸಬ್ ರಿಜಿಸ್ಟ್ರಾರ್ ಕಚೇರಿ ಆವರಣ, ಪಿ. ಬಿ. ರಸ್ತೆ, ದಾವಣಗೆರೆ. ಮೊ. : 98440 65710


# ನಗರದಲ್ಲಿ ನಾಳೆ ಉದ್ಯೋಗ ಮೇಳ

ದಾವಣಗೆರೆ, ಸೆ.19- ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ, ಮಾದರಿ ವೃತ್ತಿ ಕೇಂದ್ರದ ವತಿಯಿಂದ ನಾಡಿದ್ದು ದಿನಾಂಕ 21 ರ ಗುರುವಾರ ಬೆಳಗ್ಗೆ 10 ಗಂಟೆಗೆ ಜಿಲ್ಲಾಡಳಿತ ಭವನದಲ್ಲಿರುವ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ (ಕೊಠಡಿ ಸಂಖ್ಯೆ 51) ದಲ್ಲಿ ಉದ್ಯೋಗ ಮೇಳವನ್ನು ಆಯೋಜಿಸಲಾಗಿದೆ. ವಿವರಕ್ಕೆ ದೂರವಾಣಿ : 6361550016, 08192-259446 ಸಂಪರ್ಕಿಸಲು ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ, ಜಿಲ್ಲಾ ಉದ್ಯೋಗಾಧಿಕಾರಿ ಡಿ. ರವೀಂದ್ರ ತಿಳಿಸಿದ್ದಾರೆ.

# ಚಿತ್ರದುರ್ಗದಲ್ಲಿ ಇಂದು

ಐತಿಹಾಸಿಕ ನಗರ ಚಿತ್ರದುರ್ಗದಲ್ಲಿ ಶ್ರೀ ಜಗದ್ಗುರು ಮುರುಘರಾಜೇಂದ್ರ ಬೃಹನ್ಮಠದ ವತಿಯಿಂದ ಶರಣ ಸಂಸ್ಕೃತಿ ಉತ್ಸವ ಆಚರಿಸುತ್ತಿದ್ದು, ಸಮಾರಂಭದ ಸಿದ್ಧತೆಗಳ ಬಗ್ಗೆ ಚರ್ಚಿಸಲು ಇಂದು ಸಂಜೆ 5ಕ್ಕೆ ಶ್ರೀ ಮುರುಘಾ ಮಠದಲ್ಲಿ ಸಭೆ ಕರೆಯಲಾಗಿದೆ.


ನಮ್ಮ ಕ್ಯಾನ್ಸರ್ ಮತ್ತು ಕಿಡ್ನಿ ಸ್ಪೆಷಲಿಸ್ಟ್‌ರಿಂದ ಸಮಾಲೋಚನೆ

ನಂಜಪ್ಪ ಹಾಸ್ಪಿಟಲ್ಸ್ ದಾವಣಗೆರೆ

• ಮೆಡಿಕಲ್ ಆಂಕೊಲಾಜಿಸ್ಟ್
ಡಾ|| ನಮ್ರತಾ ಉಡುಪ: ಪ್ರತಿ ಗುರುವಾರ
ಡಾ|| ಈರಪ್ಪ ಮದಭಾವಿ: ಪ್ರತಿ ಶನಿವಾರ

• ಕಿಡ್ನಿ (ಮೂತ್ರಪಿಂಡ ಶಾಸ್ತ್ರಜ್ಞರು) ತಜ್ಞರು
ಡಾ|| ಹರೀಶ್ ಕೆ ಆರ್: ಪ್ರತಿ ಗುರುವಾರ

• ಸರ್ಜಿಕಲ್ ಆಂಕೊಲಾಜಿಸ್ಟ್
ಡಾ|| ನಿಶ್ಚಲ್ – ಸೋಮವಾರದಿಂದ ಶನಿವಾರದ ವರೆಗೆ

• ರೇಡಿಯೇಷನ್ ಆಂಕೊಲಾಜಿಸ್ಟ್
ಡಾ|| ಶರಶ್ಚಂದ್ರ – ಪ್ರತಿ ತಿಂಗಳ 2ನೇ ಮತ್ತು 4ನೇ ಗುರುವಾರ




ಮಾಗನೂರು ಬಸಪ್ಪ ರಸ್ತೆ, ತರಳಬಾಳು ಲೇಔಟ್, ದಾವಣಗೆರೆ 08192-260111 / 7022260111



ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ನಿ., ಹರಿಹರ.

ಸರ್ವ ಸದಸ್ಯರ ಸಭೆಯ ಆಹ್ವಾನ ಪತ್ರಿಕೆ

ದಿನಾಂಕ : 21.09.2023ನೇ ಗುರುವಾರ ಬೆಳಿಗ್ಗೆ 11.30 ಗಂಟೆಗೆ ಬ್ಯಾಂಕಿನ 2022-2023ನೇ ಸಾಲಿನ ಸರ್ವ ಸದಸ್ಯರ ಮಹಾಸಭೆಯನ್ನು ಬ್ಯಾಂಕಿನ ಅಧ್ಯಕ್ಷರಾದ ಶ್ರೀಮಾನ್ ಹೆಚ್.ಟಿ. ಧರ್ಮರಾಜ್‌ರವರು ಹಳ್ಳಿಹಾಳು ಗ್ರಾಮ, ಇವರ ಘನ ಅಧ್ಯಕ್ಷತೆಯಲ್ಲಿ ಹರಿಹರದ ಕಾಟ್ವೆ ಭವನದಲ್ಲಿ ನಡೆಸಲು ಏರ್ಪಡಿಸಲಾಗಿದೆ. ಕಾರಣ ಮಾನ್ಯ ಸದಸ್ಯರು ಸಕಾಲಕ್ಕೆ ಆಗಮಿಸಿ, ಸಭೆಯ ಕಾರ್ಯಕಲಾಪಗಳಲ್ಲಿ ಭಾಗವಹಿಸಲು ಕೋರಿದೆ.



ಹೆಚ್.ಟಿ. ಧರ್ಮರಾಜ್ ಹಳ್ಳಿಹಾಳು, ಅಧ್ಯಕ್ಷರು | ಬಿ.ಟಿ. ವಾಮದೇವಪ್ಪ ಧೂಳೆಹೊಳೆ, ಉಪಾಧ್ಯಕ್ಷರು | ಡಿ. ರಾಮಪ್ಪ ಭಾನುವಳ್ಳಿ ನಿರ್ದೇಶಕರು | ಎ. ಸಿದ್ಧವೀರಪ್ಪ ಬೆಳ್ಳೂಡಿ ನಿರ್ದೇಶಕರು | ಹೆಚ್. ಚಂದ್ರಪ್ಪ ಗುತ್ತೂರು, ನಿರ್ದೇಶಕರು | ಸಿರಿಗೆರೆ ರಾಜಣ್ಣ ಮಲೇಬೆನ್ನೂರು ನಿರ್ದೇಶಕರು | ಪ್ರಸನ್ನ ಬಣಕಾರ ಹನಗವಾಡಿ ನಿರ್ದೇಶಕರು

ಕೆ. ರವೀಂದ್ರನಾಥ ಗುತ್ತೂರು ನಿರ್ದೇಶಕರು | ಗೌಡ್ರ ಆಂಜನೇಯ ಯಲವಟ್ಟಿ ನಿರ್ದೇಶಕರು | ಕೆ.ಎಂ. ಬಸವರಾಜಪ್ಪ ಸಿರಿಗೆರೆ, ನಿರ್ದೇಶಕರು | ಹೆಚ್.ಕೆ. ನಾಗರಾಜ್ ಹರಿಹರ, ನಿರ್ದೇಶಕರು | ಶ್ರೀಮತಿ ಅಂಜಿನಮ್ಮ ಕೊಕ್ಕನೂರು, ನಿರ್ದೇಶಕರು | ಶ್ರೀಮತಿ ಸುಧಾ ಕೆ.ಎನ್. ಕೊಂಡಜ್ಜಿ, ನಿರ್ದೇಶಕರು | ಶ್ರೀಮತಿ ಆರ್.ಬಿ. ವಿಜಯಲಕ್ಷ್ಮಿ, ನಿರ್ದೇಶಕರು




ಶ್ರೀ ಮುರುಘರಾಜೇಂದ್ರ ಕೋ-ಆಪರೇಟಿವ್ ಬ್ಯಾಂಕ್ ಲಿ.

#1058/3-4, ಜಯದೇವ ಸರ್ಕಲ್ ಹತ್ತಿರ, ಲಾಯರ್ ರೋಡ್, ಕೆ.ಬಿ. ಬಡಾವಣೆ, ದಾವಣಗೆರೆ-577 002. ಫೋನ್ : 08192 257901/255875, 230304,



ಎಂ. ಜಯಕುಮಾರ್ ಅಧ್ಯಕ್ಷರು



ಕೆ.ಆರ್. ಪರಮೇಶ್ವರಪ್ಪ ನಿರ್ದೇಶಕರು | ಹೆಚ್.ವಿ. ಮಂಜುನಾಥಸ್ವಾಮಿ ನಿರ್ದೇಶಕರು | ಕೆ.ಜಿ. ಚನ್ನಬಸಪ್ಪ ನಿರ್ದೇಶಕರು | ಸೋಗಿ ಆರ್. ಶಿವಯೋಗಿ ನಿರ್ದೇಶಕರು (30.07.2022ರವರೆಗೆ) | ಎಂ.ಎಸ್. ಶಿವಯೋಗಿ ನಿರ್ದೇಶಕರು | ಶ್ರೀಮತಿ ಜ್ಯೋತಿ ಆರ್. ಜೆಂಬಗಿ ನಿರ್ದೇಶಕರು | ಎನ್. ನೀಲಗಿರಿ ನಿರ್ದೇಶಕರು

ಎಸ್.ವಿ. ರಾಮಚಂದ್ರಪ್ಪ ನಿರ್ದೇಶಕರು | ಮಹೇಶ್ ಬಿ. ಶೇಂಡಗೆ ನಿರ್ದೇಶಕರು | ಕೆ.ಎಸ್. ಸತೀಶ್ ನಿರ್ದೇಶಕರು | ಶ್ರೀಮತಿ ಬಿ.ವಿ. ಮಂಗಳ ಬೂಸ್ನೂರು ನಿರ್ದೇಶಕರು | ಶ್ರೀ ಸೋಗಿ ಎಸ್. ಶಮಂತ್ ನಿರ್ದೇಶಕರು (30.12.2022ರಿಂದ) | ಕೆ. ಮುರುಗೇಶಪ್ಪ ವಿಶೇಷ ಆಹ್ವಾನಿತರು



ಎಸ್. ಓಂಕಾರಪ್ಪ ಉಪಾಧ್ಯಕ್ಷರು

**ಸೂಚನೆ :**
1) ಈಗಾಗಲೇ ಬ್ಯಾಂಕಿನ ಸದಸ್ಯರಿಗೆ ವಾರ್ಷಿಕ ಮಹಾಸಭೆಯ ಆಹ್ವಾನ ಪತ್ರಿಕೆ ಕಳುಹಿಸಲಾಗಿದ್ದು, ಕೆಲವು ಪ್ರತಿಗಳು ವಿಳಾಸ ಬದಲಾವಣೆಯಿಂದ ಬ್ಯಾಂಕಿಗೆ ವಾಪಸ್ ಬಂದಿರುತ್ತವೆ. ಆದಕಾರಣ, ಬ್ಯಾಂಕಿನ ಕಛೇರಿ ವೇಳೆಯಲ್ಲಿ ಬಂದು ಸರಿಯಾದ ವಿಳಾಸ, ದೂರವಾಣಿ ಸಂಖ್ಯೆ ಹಾಗೂ ಕೆ.ವೈ.ಸಿ (ಚುನಾವಣಾ ಕಾರ್ಡ್, ಪಾನ್ ಕಾರ್ಡ್, ಆಧಾರ ಕಾರ್ಡ್) ನೀಡಿ, ಪತ್ರಿಕೆ ಪಡೆಯತಕ್ಕದ್ದು ಹಾಗೂ ಇದನ್ನೇ ಆಹ್ವಾನವೆಂದು ಭಾವಿಸಿ, ಆಗಮಿಸಲು ಭಾಗವಹಿಸಿ ಯಶಸ್ವಿಗೊಳಿಸಬೇಕೆಂದು ಕೋರಿಕೆ.

49ನೇ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯ ನೋಟೀಸ್

ದಿನಾಂಕ : 20.09.2023ನೇ ಬುಧವಾರ ಬೆಳಿಗ್ಗೆ 11.30 ಗಂಟೆಗೆ ಸರಿಯಾಗಿ ಬ್ಯಾಂಕಿನ 2022-23ನೇ ಸಾಲಿನ 49ನೇ ವಾರ್ಷಿಕ ಸರ್ವ ಸದಸ್ಯರ ಮಹಾಸಭೆಯನ್ನು ಬ್ಯಾಂಕಿನ ಅಧ್ಯಕ್ಷರಾದ ಶ್ರೀಯುತ ಎಂ. ಜಯಕುಮಾರ್‌ರವರ ಅಧ್ಯಕ್ಷತೆಯಲ್ಲಿ ದಿ. ದಾವಣಗೆರೆ - ಹರಿಹರ ಅರ್ಬನ್ ಸಹಕಾರ ಸಮುದಾಯ ಭವನ, ಎಂಸಿಸಿ ಎ ಬ್ಲಾಕ್, ರಾಮಕೃಷ್ಣ ಆಶ್ರಮದ ಎದುರು, ವಿನೋಬನಗರ, ದಾವಣಗೆರೆ ಇಲ್ಲಿ ಕರೆಯಲಾಗಿದೆ. ಕಾರಣ ಸರ್ವ ಸದಸ್ಯರುಗಳು ಸಮಯಕ್ಕೆ ಸರಿಯಾಗಿ ಹಾಜರಾಗಬೇಕಾಗಿ ಕೋರಲಾಗಿದೆ.

ಸಹಿ/- ಎಂ. ಜಯಕುಮಾರ್ ಅಧ್ಯಕ್ಷರು | ಸಹಿ/- ಎಸ್. ಓಂಕಾರಪ್ಪ ಉಪಾಧ್ಯಕ್ಷರು | ಸಹಿ/- ಎಂ.ಎಸ್. ಅರುಣ ವ್ಯವಸ್ಥಾಪಕರು (ಪ್ರ)

(ರೂ. ಲಕ್ಷಗಳಲ್ಲಿ)

ಬ್ಯಾಂಕಿನ ಆರ್ಥಿಕ ಪ್ರಗತಿ

| ವಿವರಗಳು | 2022-2023 | 31-08-2023 |
|---|---|---|
| 1) ಷೇರು ಬಂಡವಾಳ | 133.64 | 132.51 |
| 2) ಕಾಯ್ದಿಟ್ಟ ನಿಧಿ | 143.01 | 143.01 |
| 3) ಇತರೆ ನಿಧಿಗಳು | 66.29 | 66.29 |
| 4) ಠೇವಣಿಗಳು | 3258.87 | 3353.95 |
| 5) ಸಾಲ ಮತ್ತು ಮುಂಗಡಗಳು | 1790.89 | 1817.69 |
| 6) ದುಡಿಯುವ ಬಂಡವಾಳ | 3682.03 | 3775.11 |
| 7) ನಿವ್ವಳ ಲಾಭ | 36.35 | 17.03 |
| 8) ಸದಸ್ಯರುಗಳು | 6171 | 6168 |
| 9) ಡಿವಿಡೆಂಡ್ ಹಂಚಿಕೆ | 12% ಉದ್ದೇಶಿತ | - |

# ಕಾವೇರಿ : ಸುಪ್ರೀಂ ಮೊರೆಗೆ ರಾಜ್ಯ ಸರ್ಕಾರದ ನಿರ್ಧಾರ

ಬೆಂಗಳೂರು, ಸೆ.19 - ಕಾವೇರಿ ನದಿ ನೀರು ನಿರ್ವಹಣಾ ಪ್ರಾಧಿಕಾರದ ಆದೇಶ ಪಾಲನೆ ಮಾಡಿ ನಂತರ ರೈತರ ಉಳಿವಿಗಾಗಿ ಸುಪ್ರೀಂ ಕೋರ್ಟ್ ಮೊರೆ ಹೋಗಲು ರಾಜ್ಯ ಸರ್ಕಾರ ಮುಂದಾಗಿದೆ.

ತಮಿಳುನಾಡು ಸರ್ಕಾರದ ತಕರಾರು ಅರ್ಜಿಗೆ ಸ್ಪಂದಿಸಿದ ಸೆ.13ರಿಂದ 15 ದಿನಗಳ ಕಾಲ ಪ್ರತಿನಿತ್ಯ 5 ಸಾವಿರ ಕ್ಯೂಸೆಕ್ಸ್ ನೀರು ಹರಿಸುವಂತೆ ನೀಡಿರುವ ಆದೇಶ ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸಿದೆ.

ಸಂಕಷ್ಟದಿಂದ ಪಾರಾಗುವ ಸಂಬಂಧ ಮುಖ್ಯಮಂತ್ರಿ ಸಿದ್ಧರಾಮಯ್ಯ, ಜಲಸಂಪನ್ಮೂಲ ಇಲಾಖೆ ಹೊಣೆ ಹೊತ್ತಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಇಂದು ಕಾನೂನು ಮತ್ತು ನೀರಾವರಿ ತಜ್ಞರೊಂದಿಗೆ ಸುದೀರ್ಘ ಚರ್ಚೆ ನಡೆಸಿದ ನಂತರ ಸುಪ್ರೀಂ ಕೋರ್ಟ್ ಮೊರೆ ಹೋಗುವ ತೀರ್ಮಾನ ಕೈಗೊಂಡಿದ್ದಾರೆ.

ಸಭೆಯ ನಂತರ ಉಭಯ ನಾಯಕರು ಇಂದೇ ದೆಹಲಿಗೆ ತೆರಳಿದ್ದು, ನಾಳೆ ಬೆಳಿಗ್ಗೆ ಮಾನ್‌ಸಿಂಗ್ ಹೋಟೆಲ್‌ನಲ್ಲಿ ಕೇಂದ್ರದಲ್ಲಿ ರಾಜ್ಯ ಪ್ರತಿನಿಧಿಸುವ ಸಚಿವರು ಹಾಗೂ ಸಂಸದರು ಹಾಗೂ ಕಾನೂನು ತಜ್ಞರೊಂದಿಗೆ ಚರ್ಚಿಸಲು ನಾಳೆ ಬೆಳಿಗ್ಗೆ ಉಪಹಾರ ಸಭೆ ಕರೆದಿದ್ದಾರೆ.

ಇದಕ್ಕೂ ಮುನ್ನ ನ್ಯಾಯಾಲಯದಲ್ಲಿ ರಾಜ್ಯದ ಪರ ವಾದ ಮಾಡುತ್ತಿರುವ ಕಾನೂನು ತಜ್ಞರೊಂದಿಗೆ ಚರ್ಚಿಸಿ, ಅವರು ನೀಡುವ ಸಲಹೆಯಂತೆ ಮುಂದಿನ ತೀರ್ಮಾನ ಕೈಗೊಳ್ಳಲು ನಿರ್ಧರಿಸಲಾಗಿದೆ.

ಎಲ್ಲಾ ಅಭಿಪ್ರಾಯ ಸಂಗ್ರಹಿಸಿದ ನಂತರ ಸುಪ್ರೀಂ ಕೋರ್ಟ್ ಮೊರೆ ಹೋಗಲು ಸರ್ಕಾರ ನಿರ್ಧಾರ ಕೈಗೊಂಡಿದ್ದಾರೆ. ಸಂಕಷ್ಟಕ್ಕೆ ಸಿಲುಕಿರುವ ಕರ್ನಾಟಕವನ್ನು ಪಾರು ಮಾಡುವಂತೆ ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರುವ ಉದ್ದೇಶದಿಂದ ನಾಳೆ ಸಭೆ ಕರೆಯಲಾಗಿದೆ ಎನ್ನಲಾಗಿದೆ.

ಕಾವೇರಿ ನೀರು ನಿಯಂತ್ರಣ ಪ್ರಾಧಿಕಾರದ ಆದೇಶವನ್ನು ಪಾಲಿಸದೇ ನ್ಯಾಯಾಲಯದ ಮೆಟ್ಟಿಲು ಹತ್ತಿದರೆ ನಮ್ಮ ಅರ್ಜಿಯನ್ನು ಪುರಸ್ಕರಿಸುವುದಿಲ್ಲ ಎಂದು ಸರ್ಕಾರಕ್ಕೆ ಕಾನೂನು ತಜ್ಞರು ಎಚ್ಚರಿಕೆ ನೀಡಿದ್ದಾರೆ. ಮೊದಲು ಆದೇಶ ಪಾಲಿಸಿ ನಂತರ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿ ನಮ್ಮಲ್ಲಿನ ಸಂಕಷ್ಟವನ್ನು ಅಂಕಿ-ಅಂಶಗಳ ಸಹಿತ ಮುಂದಿಡೋಣ.

ಮುಂಗಾರು ಮಳೆ ಕೊರತೆಯಿಂದ ರಾಜ್ಯ ತೀವ್ರ ಬರಗಾಲಕ್ಕೆ ಸಿಲುಕಿದೆ. ಕಾವೇರಿ ನದಿ ಪಾತ್ರವೂ ಇದರಿಂದ ಹೊರತಾಗಿಲ್ಲ. ನಮ್ಮ ಜಲಾಶಯಗಳಿಗೆ ಹರಿದು ಬರುವ ನೀರಿನ ಪ್ರಮಾಣ ತೀರಾ ಕನಿಷ್ಠ. ಅದರಲ್ಲೇ ನೀರನ್ನು ಹಂಚಿಕೊಂಡಿದ್ದೇವೆ.

ಬೆಳೆದು ನಿಂತಿರುವ ನಮ್ಮ ಬೆಳೆ ಹಾಗೂ ಮುಂದಿನ ಬೇಸಿಗೆ ಮುಗಿಯುವವರೆಗೂ ಕುಡಿಯುವ ನೀರು ಪೂರೈಸಲು ಈಗಿರುವ ನೀರು ಸಾಲದಾಗಿದೆ.

ಎರಡೂ ರಾಜ್ಯಗಳ ಕಾವೇರಿ ನದಿ ಪಾತ್ರದಲ್ಲಿನ ವಾಸ್ತವಾಂಶ ಅರಿಯಲು ನೀವೇ ಒಂದು ತಂಡ ಕಳುಹಿಸಿ ವರದಿ ಪಡೆದು ತೀರ್ಮಾನಿಸಿ. ಅಲ್ಲಿಯವರೆಗೂ ಪ್ರಾಧಿಕಾರ ನೀಡಿರುವ ಆದೇಶಕ್ಕೆ ತಡೆ ಕೋರಲು ಸರ್ಕಾರ ನಿರ್ಧರಿಸಿದೆ.

ಬಿಳುಗುಂಡ್ಲುವಿನ ಜಲ ಮಾಪನದಲ್ಲಿ 5 ಸಾವಿರ ಕ್ಯೂಸೆಕ್ಸ್ ನೀರು ಈ ಹಿಂದೆ ಹರಿಸಿದಾಗಲು ಮೆಟ್ಟೂರಿಗೆ ತಲುಪಿರುವುದು ಎರಡರಿಂದ ಮೂರು ಸಾವಿರ ಕ್ಯೂಸೆಕ್ಸ್ ಮಾತ್ರ.

ಮೆಟ್ಟೂರು ಮತ್ತು ಬಿಳುಗುಂಡ್ಲುವಿನ ನಡುವೆ ಇಷ್ಟು ಪ್ರಮಾಣದ ನೀರು ಆವಿಯಾಗುತ್ತಿದೆ ಎಂಬ ವಾಸ್ತವ ಸಂಗತಿಯನ್ನು ಗಮನಕ್ಕೆ ತರಲು ನಿರ್ಧರಿಸಲಾಗಿದೆ.

# ಹುಕ್ಕಾಬಾರ್ ನಿಷೇಧಕ್ಕೆ ತೀರ್ಮಾನ

## ತಂಬಾಕು ಮಾರಾಟ - ಖರೀದಿ ವಯೋಮಿತಿ 21 ವರ್ಷಕ್ಕೆ ಹೆಚ್ಚಳ

ಬೆಂಗಳೂರು, ಸೆ. 19 - ಯುವ ಪೀಳಿಗೆಗೆ ಮಾರಕವಾಗಿರುವ ಹುಕ್ಕಾಬಾರ್ ನಿಷೇಧಿಸಲು ಮಹತ್ವದ ತೀರ್ಮಾನ ಕೈಗೊಂಡಿರುವ ರಾಜ್ಯ ಸರ್ಕಾರ, ತಂಬಾಕು ಮಾರಾಟ ಮತ್ತು ಖರೀದಿಗಿರುವ ವಯೋಮಿತಿಯನ್ನು 18ರಿಂದ 21 ವರ್ಷಕ್ಕೆ ಹೆಚ್ಚಿಸಲು ನಿರ್ಧರಿಸಿದೆ.

ಮತ್ತೊಂದೆಡೆ ಗಾಂಜಾ, ಆಫೀಮು ಮತ್ತು ಮತ್ತು ಬರುವ ಔಷಧ ತಡೆಗೆ ವಿಶೇಷ ಕಾರ್ಯಪಡೆಯೊಂದನ್ನು ರಚಿಸಲು ಸರ್ಕಾರ ಮುಂದಾಗಿದೆ.

ಹುಕ್ಕಾಬಾರ್‌ನಿಂದ ಮಕ್ಕಳ ಭವಿಷ್ಯ ಹಾಳಾಗುತ್ತಿದೆ. ಇವುಗಳನ್ನು ನಿಷೇಧ ಮಾಡಲು ಕಾನೂನು ತಿದ್ದುಪಡಿ ತರುವುದಾಗಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್ ಹಾಗೂ ಯುವಜನ ಸಬಲೀಕರಣ ಮತ್ತು ಕ್ರೀಡಾ ಸಚಿವ ಬಿ. ನಾಗೇಂದ್ರ ಅವರು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಹುಕ್ಕಾಬಾರ್ ನಿಷೇಧಿಸಿದರೆ ಕೆಲವರು ನ್ಯಾಯಾಲಯದ ಮೆಟ್ಟಿಲು ಹತ್ತುವ ಸಂಬಂಧವಿದೆ. ಇದನ್ನು ಗಮನದಲ್ಲಿಟ್ಟುಕೊಂಡು ಕಾಯ್ದೆಗೆ ತಿದ್ದುಪಡಿ ತಂದು ಕರ್ನಾಟಕವನ್ನು ಹುಕ್ಕಾಬಾರ್ ಮುಕ್ತ ಮಾಡಲು ನಿರ್ಧರಿಸಿದ್ದೇವೆ ಎಂದರು.

ಯುವಜನರು ವ್ಯಸನಕ್ಕೆ ಒಳಗಾಗುವಂತೆ ಆರೋಗ್ಯಕ್ಕೆ ಹಾನಿಕಾರವಾಗುವ ಪದಾರ್ಥಗಳನ್ನು ಸೇರಿಸಲಾಗುತ್ತಿದೆ. ನಿಕೋಟಿನ್ ಸೇರಿದಂತೆ ಕೆಲವೊಂದು ಡ್ರಗ್‌ಗಳನ್ನು ಬಳಸಲಾಗುತ್ತಿದೆ. ಅರ್ಧ, ಮುಕ್ಕಾಲು ಗಂಟೆ ಹುಕ್ಕಾ ಸೇವಿಸಿದರೆ, ನೂರು ಸಿಗರೇಟ್ ಸೇದಿದರೆ ಆಗುವಷ್ಟು ಆರೋಗ್ಯಕ್ಕೆ ಹಾನಿಯಾಗುತ್ತದೆ ಎಂದು ಹೇಳಿದರು.

ಅಷ್ಟೇ ಅಲ್ಲ, ತಂಬಾಕು ನಿಷೇಧ ವಲಯವನ್ನು ವಿಸ್ತರಣೆ ಮಾಡಲು ನಿರ್ಧರಿಸಿದ್ದು, ದೇವಾಲಯ, ಚರ್ಚ್, ಮಸೀದಿ ಹಾಗೂ ಆಸ್ಪತ್ರೆಗಳ ಆಸುಪಾಸಿನಲ್ಲಿ ತಂಬಾಕು ವಸ್ತು ಮಾರಾಟ ಮಾಡುವಂತಿಲ್ಲ.

ಮಾರಾಟ ನಿಷೇಧಕ್ಕೆ ಸಂಬಂಧಿಸಿದಂತೆ ಸರ್ಕಾರ ಶೀಘ್ರದಲ್ಲೇ ಆದೇಶ ಹೊರಡಿಸಲಿದೆ. ಇದು ಜನಾರೋಗ್ಯಕ್ಕೆ ಸಂಬಂಧಿಸಿದ ನಿರ್ಣಯವಾಗಿರುವುದರಿಂದ ಎಲ್ಲರೂ ಸ್ವಾಗತಿಸಲಿದ್ದಾರೆ ಎಂಬ ವಿಶ್ವಾಸವಿದೆ ಎಂದರು. ಇದುವರೆಗೂ ತಂಬಾಕು ಉತ್ಪನ್ನಗಳನ್ನು 18 ವರ್ಷ ಮೇಲ್ಪಟ್ಟವರು ಖರೀದಿ ಮಾಡಲು ಹಾಗೂ ಮಾರಾಟ ಮಾಡಲು ಅವಕಾಶವಿತ್ತು. ಅದನ್ನು 21 ವರ್ಷಕ್ಕೆ ಹೆಚ್ಚಿಸಲು ಕ್ರಮ ಕೈಗೊಳ್ಳಲಾಗುವುದು.

ವಿವಿಧ ಇಲಾಖೆಗಳ ಸಹಕಾರ ಪಡೆದು ಕಾನೂನು ತಿದ್ದುಪಡಿ ಮಾಡಿ ನಮ್ಮ ಯುವ ಜನತೆ ಹಾಳಾಗುವುದನ್ನು ತಪ್ಪಿಸಲು ಕಠಿಣ ಕ್ರಮ ಕೈಗೊಳ್ಳಲಾಗುವುದು.

ವ್ಯಸನ ಮುಕ್ತ ಯುವ ಜನರು ಹಾಗೂ ಅವರ ಪೋಷಕರಿಗೆ ಸೂಕ್ತ ಕೌನ್ಸಿಲ್ ವ್ಯವಸ್ಥೆಗೂ ಅವಕಾಶ ಕಲ್ಪಿಸಲಾಗುವುದು. ಯಾವುದೇ ಆಹಾರ ಪದಾರ್ಥದ ಜತೆಗೆ ತಂಬಾಕು ಸೇರಿಸಲು ಅವಕಾಶವಿಲ್ಲ. ಒಂದು ವೇಳೆ ಆಹಾರ ಪದಾರ್ಥಕ್ಕೆ ತಂಬಾಕು ಸೇರ್ಪಡೆಯಾಗಿದ್ದರೆ ಅದು ಕಾನೂನು ಬಾಹಿರವಾಗಲಿದೆ ಎಂದು ಹೇಳಿದರು.

## ಟಿಕೆಟ್ ವಂಚನೆ ಪ್ರಕರಣ : ಅಭಿನವ ಸ್ವಾಮೀಜಿ ಬಂಧನ

